# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 21-11-2016ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ : | | |
| ಎಂ.ಕೆ.ಗುಣಶೇಖರ್ | – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಬಿ.ಎನ್.ನಿತೀಶ್ ಪುರುಶೋತ್ತಮ | – ಸದಸ್ಯರು | ಕಾನೂನು ಕೋಶಾಧಿಕಾರಿ, |
| ಕೆ.ಎಂ.ಮಮತ | – ಸದಸ್ಯರು | ಮುಖ್ಯಲೆಕ್ಕಾಧಿಕಾರಿ, ಮುಖ್ಯ ಆರ್ಥಿಕ ಅಧಿಕಾರಿ, |
| ಜೆ.ಎನ್.ಶ್ರೀನಿವಾಸಮೂರ್ತಿ | – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ವಿಶೇಷ-ವಿಭಾಗ), (ಬ್ಯಾಟರಾಯನಪುರ), (ಮಹದೇವಪುರ), (ಬೆಂಗಳೂರು-ದಕ್ಷಿಣ), (ಬಿಎಂಆರ್‌ಸಿಎಲ್), |
| ಎಂ.ಮಹದೇವ | – ಸದಸ್ಯರು | |
| ಪದ್ಮಾವತಿ ನರಸಿಂಹಮೂರ್ತಿ | – ಸದಸ್ಯರು | |
| ಮಮತ ಕೆ.ಬಿ. ವಾಸುದೇವ | – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ನಿರ್ವಹಣೆ, |
| ಎಂ.ಪದ್ಮಾವತಿ ಶ್ರೀನಿವಾಸ್ | – ಸದಸ್ಯರು | |
| ಎನ್.ಲೋಕೇಶ್ | – ಸದಸ್ಯರು | |
| ಎಂ. ಶಶಿರೇಖಾ | – ಸದಸ್ಯರು | |
| ಬಿ.ಸುಮಂಗಲ | – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

***01]. ವಿಷಯದ ಸಂಖ್ಯೆ: ತೆಆಸ್ಥಾಸ/43/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-07-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Shifting of Borewell at Konanakunte signal and UGD line at Doddakallasandra, Kanakapura main road in ward No 197 ಕಾಮಗಾರಿಯ ಅಂದಾಜು ಮೊತ್ತ ರೂ. 21.15 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾರ್ಯಪಾಲಕ ಅಭಿಯಂತರರು (ಬೆಂಗಳೂರು-ದಕ್ಷಿಣ) ರವರು ಪ್ರಸ್ಥಾವನೆ ಸಲ್ಲಿಸಿ, ಕಾಮಗಾರಿ ಕೈಗೊಳ್ಳಲು BMRCL ರವರು ರೂ. 21.50 ಲಕ್ಷಗಳ ಮೊತ್ತವನ್ನು ಚೆಕ್‌ಸಂಖ್ಯೆ 691575/ದಿನಾಂಕ: 04.12.2015 ರಲ್ಲಿ ಪಾಲಿಕೆಗೆ ಜಮಾ ಮಾಡಲಾಗಿದೆ ಎಂದು ವರದಿಸಿರುತ್ತಾರೆ. Deposit Contribution ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ-2348 Deposit Contribution Works ಅಡಿ ಪರಿಗಣಿಸಬಹುದಾಗಿದೆ. 2016-17 ನೇ ಸಾಲಿನ ಆಯವ್ಯಯದಲ್ಲಿ (ಪುಟ ಸಂಖ್ಯೆ 143) ಲೆಕ್ಕಶೀರ್ಷಿಕೆ ಪಿ-2348 ನ ಚಾಲ್ತಿ ಕಾಮಗಾರಿಗಳ ಅಡಿ ರೂ. 10.00 ಲಕ್ಷಗಳ ಅನುದಾನ ಮಾತ್ರ ಮೀಸಲಿರಿಸಿದ್ದು, ಪ್ರಸ್ತಾವನೆಯ ಮೊತ್ತ ರೂ. 21.15 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ಅನುದಾನ ಕೊರತೆ ಇರುತ್ತದೆ. ಲೆಕ್ಕಶೀರ್ಷಿಕೆ ಪಿ-2348 ಅಡಿ ರೂ. 21.15 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದೆ. BMRCL ರವರು ರೂ.21.50 ಲಕ್ಷಗಳ ಮೊತ್ತವನ್ನು ಪಾಲಿಕೆಗೆ ಜಮಾ ಮಾಡಿರುವುದರಿಂದ ರೂ.21.15 ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ ಪಿ-2348 ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26.07.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***02]. ವಿಷಯದ ಸಂಖ್ಯೆ: ತೆಆಸ್ಥಾಸ/50/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16 ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ : ನಅಇ 279 ಎಸ್.ಎಫ್.ಸಿ 2015, ಬೆಂಗಳೂರು ದಿನಾಂಕ : 08.01.2016 ರಲ್ಲಿ ರೂ. 976.00 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಅದರಲ್ಲಿ ಕ್ರ.ಸಂ 1 ರಲ್ಲಿ ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ಕಾರ್ಯಾರಂಭಕ್ಕೆ ರೂ. 200.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 238 ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ : 18-06-2016 ರಲ್ಲಿ ಮೇಲ್ಕಂಡ ರೂ. 200.00 ಕೋಟಿಗಳಲ್ಲಿ ವಾರ್ಡ್ ಸಂಖ್ಯೆ 40ರ ದೊಡ್ಡಬಿದರಕಲ್ಲು ಘಟಕ, ವಾರ್ಡ್ 198ರ ಲಿಂಗಧೀರನಹಳ್ಳಿ ಘಟಕ, ಸುಬ್ಬರಾಯನ ಪಾಳ್ಯ ಘಟಕ, ಸೀಗೆಹಳ್ಳಿ, ಕನ್ನಹಳ್ಳಿ ಘಟಕಗಳ ಒಟ್ಟು 32 ಕಾಮಗಾರಿಗಳ ಅಂದಾಜು ಮೊತ್ತ ರೂ. 66.00 ಕೋಟಿಗಳಿಗೆ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಭರಿಸಲು ಅನುಮೋದನೆ ನೀಡಿದೆ. ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು 2016-17ರ ಲೆಕ್ಕಶೀರ್ಷಿಕೆ "P-3106 ನಗರೋತ್ಥಾನ ಕಾಮಗಾರಿಗಳು" Current Works ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. 2016-17ರ ಆಯವ್ಯಯದಲ್ಲಿ (ಪುಟಸಂಖ್ಯೆ 184) ಲೆಕ್ಕಶೀರ್ಷಿಕೆ P-3106ನ CurrentWorks ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಮದ ತುರ್ತಾಗಿ ಕೈಗೊಳ್ಳಬೇಕಿದೆ. ಆಯವ್ಯಯದಲ್ಲಿ ಅನುದಾನ ಮೀಸಲಿರಿಸದ ಕಾರಣ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 32 ಕಾಮಗಾರಿಗಳ ಮೊತ್ತ ರೂ. 6600.00 ಲಕ್ಷಗಳ ಅನುದಾನವನ್ನು 2016-17ರ ಲೆಕ್ಕಶೀರ್ಷಿಕೆ P-3106ನ Current Works ಅಡಿ ಅಳವಡಿಸಿಕೊಂಡು 310-17-000026 ರಿಂದ 310-17-000057 ರವರೆಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

***03]. ವಿಷಯದ ಸಂಖ್ಯೆ: ತೆಆಸ್ಥಾಸ/52/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16ನೇ ಸಾಲಿಗೆ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದಲ್ಲಿ ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಆಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ 08-01-2016 ರಲ್ಲಿ ರೂ. 250.00 ಕೋಟಿಗಳ ವಿಶೇಷ ಅನುದಾನವನ್ನು ಮೀಸಲಿರಿಸಿದೆ. ಸರ್ಕಾರದ ಅನುಮೋದನೆಯಂತೆ 2015-16 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿ ಪಿ-3089 ಅಡಿ ರೂ. 175.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಉಳಿಕೆ ರೂ.75.00 ಕೋಟಿಗಳ ಪೈಕಿ ಪ್ರಸ್ತುತ ನಅಇ 73 ಎಸ್‌ಎಫ್‌ಸಿ 2016, ಬೆಂಗಳೂರು ದಿನಾಂಕ: 25-06-2016ರಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ರೂ.20.00 ಕೋಟಿಗಳಿಗೆ ಅನುಮೋದನೆ ನೀಡಿದೆ. 2016-17ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಜಾಬ್‌ಸಂಖ್ಯೆ ನೀಡಿ ಕಾಮಗಾರಿ

ಅನುಷ್ಠಾನಗೊಳಿಸಲು ಪಿ-3089 ಅಡಿ ರೂ.20.00 ಕೋಟಿಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದ್ದು, ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***04]. ವಿಷಯದ ಸಂಖ್ಯೆ: ತೆಆಸ್ಥಾಸ/56/2016-17***

ಜಂಟಿ ಆಯುಕ್ತರು (ಆರೋಗ್ಯ) ರವರ ದಿನಾಂಕ: 22.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಂಟಿ ಆಯುಕ್ತರು (SWM) ರವರು ಕೋಗಿಲು-ಕಣ್ಣೂರು ಮುಖ್ಯರಸ್ತೆಯಿಂದ ಬೆಳ್ಳಹಳ್ಳಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳಿಗೆ ಪರ್ಯಾಯ ರಸ್ತೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 204.00 ಲಕ್ಷಗಳಿಗೆ ಕೇಂದ್ರ ಸರ್ಕಾರದ ಯೋಜನೆ **ಸ್ವಚ್ಛ ಭಾರತ್ ಮಿಷನ್** ಅಡಿಯಲ್ಲಿ ಬಿಡುಗಡೆಯಾಗಿರುವ **ರೂ. 41.15 ಕೋಟಿಗಳಲ್ಲಿ** ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಲಭ್ಯವಿಲ್ಲದ ಬಗ್ಗೆ ಚರ್ಚಿಸಲಾಗಿ, ಅವಶ್ಯಕತೆಗೆ ಅನುಗುಣವಾಗಿ SWM ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಸಿದ್ದಪಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮಾನ್ಯ ಆಯುಕ್ತರು ಕಾಮಗಾರಿ ಕೈಗೊಳ್ಳಲು ಜಾಬ್‌ಸಂಖ್ಯೆ ನೀಡಲು ಅನುಮೋದನೆ ನೀಡಿರುತ್ತಾರೆ.

2016-17ರ ಆಯವ್ಯಯದ (ಪುಟಸಂಖ್ಯೆ-180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು- ಸ್ವಚ್ಛ ಭಾರತ್ ಅಭಿಯಾನದ ಕಾಮಗಾರಿಗಳು ಪಿ-3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ರೂ. 41.15 ಕೋಟಿ ಅನುದಾನವನ್ನು ಈಗಾಗಲೆ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ, ಲೆಕ್ಕಶೀರ್ಷಿಕೆ ಪಿ-3112 ಅಡಿ ರೂ. 49.88 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ರೂ. 199.88 ಲಕ್ಷಗಳಿಗೆ ಈಗಾಗಲೇ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಸದರಿ ಪ್ರಸ್ತಾವನೆ ಮೊತ್ತ ರೂ. 204.00 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ರೂ. 204.00 ಲಕ್ಷಗಳ ಅನುದಾನದ ಕೊರತೆ ಇರುತ್ತದೆ. ಆಯವ್ಯಯದಲ್ಲಿ ಕೊರತೆ ಅನುದಾನಕ್ಕೆ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಲೆಕ್ಕಶೀರ್ಷಿಕೆ ಪಿ-3112 ಅಡಿ ರೂ. 204.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ರೂ. 204.00 ಲಕ್ಷಗಳಿಗೆ 310-17-000058 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***05]. ವಿಷಯದ ಸಂಖ್ಯೆ: ತೆಆಸ್ಥಾಸ/57/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಡಿ.ಕೆ.ಸುರೇಶ್, ಮಾನ್ಯ ಲೋಕಸಭಾ ಸದಸ್ಯರು ಬೆಂಗಳೂರು ಗ್ರಾಮಾಂತರ ಜಿಲ್ಲೆ. ಬೆಂಗಳೂರು ರವರು, ಕೆಂಭತ್ತಹಳ್ಳಿ ಸರ್ವೆ ನಂ.55ರಲ್ಲಿ ಬಡಾವಣೆ ನಿರ್ಮಾಣ ಮಾಡಿ ನೈಜ ಫಲಾನುಭವಿಗಳನ್ನು ಗುರುತಿಸಿ ಹಕ್ಕು ಪತ್ರಗಳನ್ನು ವಿಸ್ತರಿಸಲು ಕೋರಿರುತ್ತಾರೆ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ, ಕೆಂಬತ್ತಹಳ್ಳಿ ಗ್ರಾಮದ ಸರ್ವೆ ನಂ.55 ರಲ್ಲಿ 8-10ಎಕರೆ ಸರ್ಕಾರಿ ಜಮೀನನ್ನು

ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಯಲ್ಲಿ ವಸತಿ ರಹಿತರಿಗೆ ಆಶ್ರಯ ಯೋಜನೆಗೆ ವಸತಿ ಒದಗಿಸುವ ಉದ್ದೇಶಕ್ಕಾಗಿ ಕಾಯ್ದಿರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಹಸ್ತಾಂತರಿಸಲು ಆದೇಶಿಸಲಾಗಿದೆ.

- ಸದರಿ ಜಮೀನನ್ನು ನಿಧಿಷ್ಟಪಡಿಸಿದ ಉದ್ದೇಶಕ್ಕಾಗಿ ಎರಡು ವರ್ಷಗಳ ಒಳಗಾಗಿ ಬಳಕೆ ಮಾಡತಕ್ಕದ್ದು.
- ಉದ್ದೇಶಿತ ಯೋಜನೆಗೆ ಈ ಜಮೀನು ಬಳಕೆಯಾಗದಿದ್ದಲ್ಲಿ ಸದರಿ ಜಮೀನು ಬೇಷರತ್ತಾಗಿ ಕಂದಾಯ ಇಲಾಖೆಯಲ್ಲಿ ನಿಹಿತವಾಗುತ್ತದೆ.
- ಪ್ರಶ್ನಿತ ಜಮೀನಿನ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ ಈ ಆದೇಶವನ್ನು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
- ಈ ಭೂಮಿಯಲ್ಲಿ ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಎನನ್ನು ಮಾಡತಕ್ಕದ್ದಲ್ಲ.
- ತಾಲ್ಲೂಕು ಮೋಜಣಿದಾರರು ಸದರಿ ಜಮೀನಿನ ಬಗ್ಗೆ ಅಳತೆ ಮಾಡಿ ಹದ್ದುಬಸ್ತು ನಿಗಧಿಪಡಿಸುವುದು.
- ಸದರಿ ಜಮೀನನ್ನು ಆಶ್ರಯ ಯೋಜನೆಗೆ ವಸತಿ ರಹಿತರಿಗೆ ವಸತಿ ಒದಗಿಸುವ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು, ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದಲ್ಲ.
- ಸರ್ಕಾರದ ಬೇರೆ ಯೋಜನೆಗೆ ಮೇಲ್ಕಂಡ ಜಮೀನು ಬೇಕಾಗಿದ್ದಲ್ಲಿ ಕೂಡಲೇ ಬಿಟ್ಟುಕೊಡತಕ್ಕದ್ದು.

ಮತ್ತು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರು ರವರು ಸದರಿ ಜಮೀನನ್ನು ಬಿ.ಬಿ.ಎಂ.ಪಿಗೆ ಹಸ್ತಾಂತರಿಸಲಾಗಿದೆ. ಈ ಹಿನ್ನಲೆಯಲ್ಲಿ ಸದರಿ ಸ್ಥಳದಲ್ಲಿ ವಸತಿ ರಹಿತರಿಗೆ ಆಶ್ರಯ ಯೋಜನೆಗೆ ವಸತಿ ಒದಗಿಸಲು ಯೋಜಿಸಲಾಗಿರುತ್ತದೆ. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರು ಸದರಿ ಜಮೀನಿನಲ್ಲಿ ವಸತಿಗಳನ್ನು ವಿಂಗಡಿಸಿದ್ದು ಈ ಬಡಾವಣೆ ನಿರ್ಮಾಣ ಮಾಡಲು ಅವಶ್ಯಕವಾಗಿ ಬೇಕಾಗುವ ಕಾಮಗರಿಗಳಾದ, ರಸ್ತೆ ಮತ್ತು ಚರಂಡಿಗಳಿಗೆ ಲೋಕೋಪಯೋಗಿ ಇಲಾಖೆಯ 2015-16 ಸಾಲಿನ ದರಪಟ್ಟಿಯನ್ನು ಆಧಾರಿಸಿ ರೂ.802.20 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಈ ಪ್ರಸ್ತಾಪಿಸಿರುವ ಬಡಾವಣೆಯಲ್ಲಿ ರಸ್ತೆ ಮತ್ತು ಡ್ರೈನ್ ಕೆಲಸಗಳನ್ನು ಕೈಗೆತ್ತಿಕೊಳ್ಳಲು 2016-17ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿರುವ ಲೆಕ್ಕಶೀರ್ಷಿಕೆ ಪಿ-0001 ಅಡಿ ರೂ.2000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು ಈ ಅನುದಾನದ ಪೈಕಿ ರೂ.802.20 ಲಕ್ಷಗಳ ಮೊತ್ತವನ್ನು ಅನುಮೋದಿಸಲು ಸಮಿತಿಯ ಮುಂದೆ ಮಂಡಿಸಿದೆ.

**ನಿರ್ಣಯ: ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.08.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***06]. ವಿಷಯದ ಸಂಖ್ಯೆ: ತೆಆಸ್ಥಾಸ/65/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 31-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ ನಅಇ 524 ಎಸ್.ಎಫ್.ಸಿ 2015 / ದಿನಾಂಕ 05.01.2016 ರಲ್ಲಿ ರೂ. 17033.00 ಲಕ್ಷಗಳ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ. ಅದರಲ್ಲಿ ಸಾಮೂಹಿಕ / ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ. 1098.05 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು,

ವಲಯವಾರು ಅನುದಾನ ನಿಗದಿ ಮಾಡಿರುತ್ತದೆ. ರೂ. 1098.05 ಲಕ್ಷಗಳ ಪೈಕಿ 2015-16 ನೇ ಸಾಲಿನಲ್ಲಿ ಕ್ರಿಯಾಯೋಜನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುವ ರೂ. 288.38 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಕ್ರಿಯಾ ಯೋಜನೆ ಸಲ್ಲಿಸದೇ ಇದ್ದುದರಿಂದ ಉಳಿದ ವಲಯಗಳ ಮೊತ್ತ ರೂ. 809.67 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಿರುವುದಿಲ್ಲ. ಪೂರ್ವ ವಲಯದ ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ. 244.01 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಮುಖ್ಯ ಅಭಿಯಂತರರು (ಪೂರ್ವ) ರವರು 2015-16ನೇ ಸಾಲಿನ ರೂ 153.46 ಲಕ್ಷಗಳ ಕ್ರಿಯಾ ಯೋಜನೆಗೆ 14ನೇ ಹಣಕಾಸು ಆಯೋಗದ ಅನುದಾನದಡಿ ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮುಖ್ಯ ಲೆಕ್ಕಾಧಿಕಾರಿಗಳು 2015-16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಮಂಜೂರಾಗಿದ್ದ ರೂ. 170.33 ಕೋಟಿಗಳು ಪಾಲಿಕೆಗೆ ಬಿಡುಗಡೆಯಾಗಿರುವುದಾಗಿ ವರದಿಸಿರುತ್ತಾರೆ. ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ಶೌಚಾಲಯದ ಪ್ರಸ್ತಾವನೆ ಮೊತ್ತ ರೂ. 153.46 ಲಕ್ಷಗಳ ಅನುದಾನವನ್ನು 2016-17ರ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕಶೀರ್ಷಿಕೆ ಪಿ-3110 ಅಡಿ ಅಳವಡಿಸಿಕೊಂಡು ಮಾನ್ಯ ಆಯುಕ್ತರ ಆದೇಶದಂತೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಘಟನೋತ್ತರ ಅನುಮೋದನೆ ನಿರೀಕ್ಷಿಸಿ ರೂ.153.46 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪೂರ್ವ ವಲಯದಲ್ಲಿನ ವಾರ್ಡ್ ಸಂಖ್ಯೆ: 63 ರಲ್ಲಿಯೂ ಸಹ ಸಾರ್ವಜನಿಕ ಶೌಚಾಲಯ ನಿರ್ಮಿಸುವ ಕ್ರಿಯಾಯೋಜನೆಯನ್ನು ಸಹ ಸೇರಿಸಿಕೊಂಡು ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 31.08.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *07]. ವಿಷಯದ ಸಂಖ್ಯೆ: ತೆಆಸ್ಥಾಸ/66/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-09-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 139ರ ಕೆ.ಆರ್ ಮಾರುಕಟ್ಟೆ ಟಿ.ಸಿ.ಎಂ ರಾಯನ್ ರಸ್ತೆಯಲ್ಲಿ ಬರುವ ಅನಧಿಕೃತವಾಗಿ ನಿರ್ಮಿಸಿರುವ ಸುಮಾರು 34 ಅಂಗಡಿ ಮಳಿಗೆಗಳನ್ನು ನಿರ್ಮಿಸಿದ್ದು, ತೆರವುಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 6,89,500.00 ಲಕ್ಷಗಳಿಗೆ ಲೆಕ್ಕಶಿರ್ಷಿಕೆ ಪಿ-0055 ಅಡಿ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕೋರಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **12.14** | **137.11** | 0.75 | **6.895** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 2.90 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ ಖಈಒಖ ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 6.895 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01.09.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***08]. ವಿಷಯದ ಸಂಖ್ಯೆ: ತೆಆಸ್ಥಾಸ/69/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06.09.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 160ರಲ್ಲಿ ಸ್ವತ್ತಿನ ಸಂಖ್ಯೆ 2319/2254/49/2307, ನಿವೇಶನ ಸಂಖ್ಯೆ 49, ಬಿ.ಇ.ಎಂ.ಎಲ್ 5ನೇ ಹಂತ, ಹಲಗೇವೆಡರಹಳ್ಳಿ ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 11.85 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ರಾಜರಾಜೇಶ್ವರಿನಗರ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: **P- 0055 "Encroachment clearance Expenses ( Demolition charges)" Budget Book Page No. 111** (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **31.19** | **118.06** | 0.75 | **11.85** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 11.85 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 11.85 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06.09.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***09]. ವಿಷಯದ ಸಂಖ್ಯೆ: ತೆಆಸ್ಥಾಸ/70/2016-17***

ಆಯುಕ್ತರ ದಿನಾಂಕ: 03-09-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ನಾಗೇಶ್ವರರಾವ್ ಪ್ರಧಾನ ಕಾರ್ಯದರ್ಶಿಗಳು ಕರ್ನಾಟಕ ಟೆನ್ನಿಸ್ ವಾಲಿಬಾಲ್ ಅಸೋಸಿಯೇಷನ್, ವಿಳಾಸ ನಂ. 695 2ನೇ ಮಹಡಿ 61ನೇ ಅಡ್ಡರಸ್ತೆ 5ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 560010 ರವರು ಶ್ರೀಯುತ ಕೆ.ಜೆ.ಜಾರ್ಜ್ ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು, ಬೆಂಗಳೂರು ರವರಿಗೆ ಮನವಿಯನ್ನು ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ದಿನಾಂಕ 25.03.2016ರಿಂದ 27.03.2016 ರವರೆಗೆ 17th Senior & Veteran National Tennis Vollyball Championship for (Men & Women) ಕಾರ್ಯಕ್ರಮಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಆರ್ಥಿಕ ನೆರವು ನೀಡಲು ನಿಯಮಾನುಸಾರ ಕ್ರಮಕೈಗೊಳ್ಳುವಂತೆ ಸೂಚಿಸಿ ಟಿಪ್ಪಣಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದಂತೆ, 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಸಂಸ್ಥೆಗೆ ಅನುಬಂಧ-2ರಲ್ಲಿ ಅನುದಾನವು ಹಂಚಿಕೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಕರ್ನಾಟಕ ಟೆನ್ನಿಸ್ ವಾಲಿಬಾಲ್ ಅಸೋಸಿಯೇಷನ್, ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***10]. ವಿಷಯದ ಸಂಖ್ಯೆ: ತೆಆಸ್ಥಾಸ/71/2016-17***

ಆಯುಕ್ತರ ದಿನಾಂಕ: 03-09-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಡಾ॥ ಹೆಚ್.ಬಿ.ರಾಜೇಗೌಡ, ಅಧ್ಯಕ್ಷರು, ಜನಸೇವಾ ಸಂಸ್ಥೆ (ರಿ), ವಿಳಾಸ ನಂ. 3, 8ನೇ ಅಡ್ಡರಸ್ತೆ, ಮೊದಲನೇ ಮಹಡಿ, ಶಿವನಗರ, ರಾಜಾಜಿನಗರ, ಬೆಂಗಳೂರು 560010 ರವರು ಮಾನ್ಯ ಉಪ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಅರ್ಜಿ ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ರಾಜ್ಯಮಟ್ಟದಲ್ಲಿ ಮೂರು ದಿನಗಳ ನಾಡಪ್ರಭು ಕೆಂಪೇಗೌಡರ 507ನೆ ಜನ್ಮೋತ್ಸವದಲ್ಲಿ ನಾಗರೀಕರಿಗೆ ಮತ್ತು ಹಲವಾರು ಗಣ್ಯವ್ಯಕ್ತಿಗಳಿಗೆ ಶ್ರೀ ನಾಡಪ್ರಭು ಕೆಂಪೇಗೌಡಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದ್ದು, ಜಾನಪದ ಕಲಾಮೇಳೋತ್ಸವ ಹಾಗೂ ಬಿ.ಬಿ.ಎಂ.ಪಿ. ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಚಿತ್ರಕಲಾಶಿಬಿರ, ವೇಷಭೂಷಣ ಸ್ಪಧೆ ಹಾಗೂ ರಸ್ತೆ ಬದಿಗಳಲ್ಲಿ ಗಿಡನೆಡುವ ಕಾರ್ಯಕ್ರಮಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ15.00 ಲಕ್ಷಗಳ ಸಹಾಯಧನವನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

ಮುಂದುವರೆದಂತೆ, 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಸಂಸ್ಥೆಗೆ ಅನುಬಂಧ-2ರಲ್ಲಿ ಅನುದಾನವು ಹಂಚಿಕೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಜನಸೇವಾ ಸಂಸ್ಥೆ (ರಿ), ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.3.00 (ಮೂರು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***11]. ವಿಷಯದ ಸಂಖ್ಯೆ: ತೆಆಸ್ಥಾಸ/72/2016-17***

ಆಯುಕ್ತರ ದಿನಾಂಕ: 03-09-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಎಂ. ನರಸಿಂಹಚಾರ್ಯ, ಅಧ್ಯಕ್ಷರು, ಶೈಲೂಷಂ, ವಿಳಾಸ ನಂ. 430, ಪೂರ್ಣಪ್ರಜ್ಞಾ ಲೇಔಟ್, ಪೂರ್ಣಪ್ರಜ್ಞಾ ರೆಸಿಡೆನ್ಸಿ, 5ನೇ ಹಂತ, ಬನಶಂಕರಿ, ಬೆಂಗಳೂರು ರವರು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಅರ್ಜಿ ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ನಡೆಸಲಾಗುವ ಚಿಣ್ಣರ ಕಲರವ ಎಂಬ ಸಂಗೀತ ನೃತ್ಯ ಉತ್ಸವವನ್ನು (ಮಕ್ಕಳ) ದಿನಾಂಕ: 22.06.2016 ರಂದು ಸೇವಾಸದನ ಮಲ್ಲೇಶ್ವರಂನಲ್ಲಿ ಪ್ರದರ್ಶಿಸಲಾಗುವುದೆಂದು ಹಾಗು ತಮ್ಮ ಸಂಸ್ಥೆಯು ಈ ತರಹದ ಅನೇಕ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ಬರುತ್ತಿದ್ದು, ತಮ್ಮ ಸಂಸ್ಥೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ10.00 ಲಕ್ಷಗಳ ಸಹಾಯಧನವನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

ಮುಂದುವರೆದಂತೆ, 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಸಂಸ್ಥೆಗೆ ಅನುಬಂಧ-2ರಲ್ಲಿ ಅನುದಾನವು ಹಂಚಿಕೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಶೈಲೂಷಂ, ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.3.00 (ಮೂರು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***12]. ವಿಷಯದ ಸಂಖ್ಯೆ: ತೆಆಸ್ಥಾಸ/73/2016-17***

ಆಯುಕ್ತರ ದಿನಾಂಕ: 03-09-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಕೃಷ್ಣಮೂರ್ತಿ, ರಾಜ್ಯಪ್ರಧಾನ ಕಾರ್ಯದರ್ಶಿಗಳು ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ, ವಿಳಾಸ ನಂ. 3/1, 8ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಪಟೇಲ್ ಹನುಮಪ್ಪ ಬಿಲ್ಡಿಂಗ್ ಶಿವನಗರ ರಾಜಾಜಿನಗರ ಬೆಂಗಳೂರು 560010 ರವರು ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಅರ್ಜಿ ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ನಡೆಸಲಾಗುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ ವರ್ಷಪೂರ್ತಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇದರ ಭಾಗವಾಗಿ ಈ ಸಾಲಿಗೆ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯರವರ 156ನೇ ಹಾಗೂ ಸಂಗೊಳ್ಳಿರಾಯಣ್ಣ, ಕಿತ್ತೂರುಚನ್ನಮ್ಮ ಜನ್ಮೋತ್ಸವ ಮತ್ತು ಜಾನಪದ ಸಾಹಿತ್ಯಗೋಷ್ಠಿ, ಕವಿಗೋಷ್ಠಿ, ಚಿತ್ರಕಲಾಶಿಬಿರ, ವೇಷಭೂಷಣ ಸ್ಪರ್ಧೆ ಹಾಗೂ ರಸ್ತೆ ಬದಿಗಳಲ್ಲಿ ಗಿಡನೆಡುವ ಕಾರ್ಯಕ್ರಮ

ಮತ್ತು ಕನ್ನಡಪರ ಕಾರ್ಯಕ್ರಮಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ12.00 ಲಕ್ಷಗಳ ಸಹಾಯಧನವನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

ಮುಂದುವರೆದಂತೆ, 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ–048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಸಂಸ್ಥೆಗೆ ಅನುಬಂಧ–2ರಲ್ಲಿ ಅನುದಾನವು ಹಂಚಿಕೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ, ರವರಿಗೆ' ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## ***13]. ವಿಷಯದ ಸಂಖ್ಯೆ: ತೆಆಸ್ಥಾಸ/74/2016–17***

ಆಯುಕ್ತರ ದಿನಾಂಕ: 07–09–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ 973 ಎಂಎನ್‌ಯು 2015, ದಿನಾಂಕ: 14–03–2016ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸದ್ಯದ ಅಗತ್ಯತೆಗೆ ಅನುಗುಣವಾಗಿ ಅವಶ್ಯಕ ಹುದ್ದೆಗಳನ್ನು ಹೊಸದಾಗಿ ಸೃಜಿಸಲು ಅನುಮೋದಿಸಿರುವ ಹುದ್ದೆಗಳನ್ನು ಹಾಗೂ ಹಾಲಿ ಪಾಲಿಕೆಯಲ್ಲಿ ಖಾಲಿ ಇರುವ ಕೆಲವು ನೇರ ನೇಮಕಾತಿ ಹುದ್ದೆಗಳನ್ನು ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ತುಂಬಬೇಕಾಗಿದ್ದು, ಸದರಿ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ವಿದ್ಯಾರ್ಹತೆ / ಮಾನದಂಡಗಳ ಮಾಹಿತಿಯನ್ನು ಒದಗಿಸಲು ಹಾಗೂ ಸದರಿ ಹುದ್ದೆಗಳನ್ನು The persons with disabilities Act of 1995ರ ಮೀಸಲಾತಿಯಂತೆ ತುಂಬಬೇಕಾಗಿದ್ದು, ಹುದ್ದೆಗಳಿಗೆ ಯಾವ ರೀತಿಯ ವಿಕಲಚೇತನ ಹೊಂದಿರುವ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಬಹುದೆಂಬ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳನ್ನು ದಿನಾಂಕ:12–04–2016ರಂದು ಸಭೆ ಕರೆದು ತೆಗೆದುಕೊಂಡ ನಿರ್ಣಯಗಳಂತೆ ಈ ಕೆಳಕಂಡ ಹುದ್ದೆಗಳಿಗೆ ಸಂಬಂಧಿಸಿದಂತೆ ಪಾರದರ್ಶಕ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ತುಂಬಬೇಕಾದ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 1. | ಕಂದಾಯ ವಸೂಲಿಗಾರರು | 105 | A Pass in PUC or equivalent examination. |
| 2. | ಪ್ರಥಮ ದರ್ಜೆ ಸಹಾಯಕರು | 90 | A degree of any recognized university. |
| 3. | ದ್ವಿತೀಯ ದರ್ಜೆ ಸಹಾಯಕರು | 100 | A Pass in PUC or equivalent examination. |
| 4. | ಕಿರಿಯ ಅಭಿಯಂತರರು (ಸಿವಿಲ್) | 20 | Must be holder of a Three years Diploma in Civil Engineering from a Government recognized Polytechnic in Karnataka or possess its equivalent qualification depending upon the requirement as the case may be. |
| 5. | ಸಹಾಯಕ ಅಭಿಯಂತರರು (ಪರಿಸರ) | 85 | Must be a holder of a Bachelor Degree in Environmental/Chemical Engineering from a Government recognized University/Institutions. |
| 6. | ಸಹಾಯಕ ಅಭಿಯಂತರರು (ನಗರಯೋಜನೆ) | 32 | Must possess a Degree in Structural/Architecture/Planning Engineering from a recognised University. |

| | | | |
|---|---|---|---|
| 7. | ಸಹಾಯಕ ಅಭಿಯಂತರರು (ಸಿವಿಲ್) | 17 | Must possess a Degree in Civil Engineering from a recognised University. |
| 8. | ಸಹಾಯಕ ಶಸ್ತ್ರಚಿಕಿತ್ಸಕರು | 68 | Must be holder of MBBS |
| 9. | ಮಕ್ಕಳ ತಜ್ಞರು | 10 | Must be holder of Post Graduate Degree / Master / Diploma in Paediatrics. |
| 10. | ಪ್ರಸೂತಿ ತಜ್ಞರು | 15 | Must be holder of Post Graduate master Degree / Diploma in Obstetrics & Gynaecology. |
| 11. | ಅರವಳಿಕೆ ತಜ್ಞರು | 12 | Must be holder of Post Graduate Master Degree / Diploma in Anaesthesia. |
| 12. | ಸ್ಟಾಫ್ ನರ್ಸ್ | 70 | 1. A pass in P.U.C examination or equivalent qualification<br>2. Must possess a certificate in general Nursing course of not less than 3 years duration. And a certificate in Midwifery or psychiatric Nursing course of not less than 6 months duration. |
| 13. | ಹಿರಿಯ ಮಹಿಳಾ ಆರೋಗ್ಯ ಸಹಾಯಕರು / ಲೇಡಿ ಹೆಲ್ತ್ ವಿಸಿಟರ್ | 46 | 1. Must have Passed SSLC or equivalent examination<br>2. Must be Holder of a ANM &LHV Training Course certificate issued by a Govt. recognised Institution. |
| 14. | ಫಾರ್ಮಸಿಸ್ಟ್ | 4 | Must be holder of a Diploma in Pharmacy granted by a Board approved under the Pharmacy Act, 1948 (central Act 8 of 1946). Must have put in not less than one year experience in Administration or Hospital Pharmacy or under a registered Medical Practitioner. |
| 15. | ಲ್ಯಾಬ್ ಟೆಕ್ನಿಷಿಯನ್ | 21 | 1. Must have passed Bachelor Degree in Science with Chemistry as one of the subject or an equivalent examination. 2.Should posses a certificate for having successfully undergone 12 months Lab. Technician Training in any Institution recognised by Govt. |
| 16. | ಹಿರಿಯ ಆರೋಗ್ಯ ಪರಿವೀಕ್ಷಕರು | 68 | (1) Must have passed PUC or equivalent examinations<br>(2) Must have completed successfully a three years of Diploma course in Sanitary Health Inspector /Health Inspector conducted by Para Medical Board of Government of Karnataka. |
| 17. | ಸಿಸ್ಟಮ್ ಅನಾಲಿಸ್ಟ್ / ಚೀಫ್ ಡಾಟಾ ಅನಾಲಿಸ್ಟ್ | 2 | Master of Computer Application/Bachelors Degree in Engineering (Computer Science/Information Technology) from a Govt. Recognised University with two years experience or post graduate Diploma in Computer Application from a University established by Law in India. Minimum three years of work experience is essential. |
| 18. | ಎ.ಎನ್.ಎಂ | 58 | Must have passed in PUC examination with ANM certificate by an institution recognised by Govt. |
| ಒಟ್ಟು | | 823 | |

ಸದರಿ ನೇರ ನೇಮಕಾತಿ ಹುದ್ದೆಗಳನ್ನು ತುಂಬುವ ಸಂಬಂಧ ಪಾರದರ್ಶಕ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ನಿರ್ದೇಶಕರು, ಇಂಡಿಯನ್ ಇನ್ಸ್ಟಿಟ್ಯೂಟ್ ಅಫ್ ಮ್ಯಾನೇಜ್‌ಮೆಂಟ್ ರವರಿಗೆ ಪತ್ರವನ್ನು ಬರೆದು ದಿನಾಂಕ:05-05-2016ರಂದು ನೇರವಾಗಿ ಸಂಪರ್ಕಿಸಲಾಗಿ, ಸದರಿಯವರು ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ನಿರಾಕರಿಸಿರುತ್ತಾರೆ. ನಂತರ ದಿನಾಂಕ: 12-05-2016ರಂದು ಇಂಡಿಯನ್ ಇನ್ಸ್ಟಿಟ್ಯೂಟ್ ಅಫ್ ಸೈನ್ಸ್ ರವರಿಗೆ ಪತ್ರವನ್ನು ಬರೆಯಲಾಗಿದ್ದು, ಸದರಿಯವರು ದಿನಾಂಕ: 28-06-2016ರಂದು ಪತ್ರವನ್ನು ಬರೆದು ಈ ಕೆಳಕಂಡಂತೆ ತಿಳಿಸಿರುತ್ತಾರೆ.

The Indian Institute of Science will be happy to undertake the above work as a consultancy project, the revised terms and conditions are given below.

| Sl No | Particular | Details |
|---|---|---|
| 1. | Consultant | Prof K.B. Akhilesh<br>Dept. of Management Studies |
| 2. | Scope if work | Advising and paper setting, Does not include conduct of the examination. Assuming there are minimum 5,000 candidate, the charge per candidate is Rs. 200+15% service tax i.e. 5000 x 200 = 10,00,000 + ST 1,50,000 = 11,50,000/- for additional candidate beyond 5000 it will be charged @ Rs. 200+ST (Pro rata). |
| 3. | Duration | One month |
| 4. | Project fee | 1. Project fee for the scope of work mentioned above – 10,00,000/-<br>2. Service tax @ 15% - 1,50,000/-<br>3. Total Project Fee – 11,50,000/- (Rupees eleven lakhs fifty thousand only) |
| 5. | Mode of Payment | The total project fee will be payable through a DD drawn in favour of the Registrar, Indian Institute of Science and mailed to the Chairman, Centre for Scientific & Industrial Consultancy, Indian Institute of Science, Bangalore-12.<br><br>Any Bank Commission for DD will have to be borne by your office. The Indian Institute of Science, is exempted from income Tax under section 10(23 C) (iiiab) of the Income Tax Act 1961. Hence no deduction of income tax be done at source. |
| 6. | Other conditions | The project will be effective from the date of receipt of the project fee. Further, unless otherwise specified, IISc will not be responsible for any legal disputes that may arise out of this project. This consultancy arrangement is between the consultant and BBMP. |

Kindly let us know whether the above terms and conditions are acceptable to you. The consultancy will be effective from the date of receipt of payment.

ಹಾಗೂ ಈ ಬಗ್ಗೆ ದಿನಾಂಕ:22-07-2016ರಂದು ಅಪರ ಆಯುಕ್ತರು (ಆಡಳಿತ), ಸಹಾಯಕ ಆಯುಕ್ತರು (ಆಡಳಿತ) ಹಾಗೂ ಸಹಾಯಕ ಆಯುಕ್ತರು (ನೇಮಕಾತಿ ಮತ್ತು ವಿಚಾರಣೆ) ಇವರೊಂದಿಗೆ ಶ್ರೀ ಕೆ.ಬಿ. ಅಖಿಲೇಶ್, ಪ್ರೊಫೆಸರ್ ಇವರನ್ನು ಸಂಪರ್ಕಿಸಿ ಚರ್ಚಿಸಲಾದಂತೆ ಈ ಕೆಳಕಂಡಂತೆ ಪತ್ರ ನೀಡಿರುತ್ತಾರೆ.

1. In Principal BBMP has agreed to pay Rs. 11,50,000/- to IISc, towards advising and paper setting.
2. The consultant is agreeable to advice and entrust conducting of the examination online through an identified agency for the smooth conduct of the entire process. BBMP has to bear approximate cost of Rs. 800/- to Rs. 1000/- per candidate exclusive of applicable taxes.

ಸದರಿ ಪತ್ರಗಳಂತೆ ನೇರ ನೇಮಕಾತಿ ನಿಯಮಗಳಡಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ರೂ. 11,50,000/–ಗಳನ್ನು ಪಾವತಿಸಲು ಕೋರಿದ್ದು, ಹಾಗೂ The consultant is agreeable to advice and entrust conducting of the examination online through an identified agency for the smooth conduct of the entire process. BBMP has to bear approximate cost of Rs. 800/- to Rs. 1000/- per candidate exclusive of applicable taxes ಎಂದು ತಿಳಿಸಿದ್ದು, ಅದರಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ಮುಂದೆ ಮಂಡಿಸಿರುವ ಟಿಪ್ಪಣಿಯಲ್ಲಿ ವಿವರಿಸಿರುವಂತೆ ನೇರ ನೇಮಕಾತಿಗಾಗಿ ಉಲ್ಲೇಖಿಸಲಾಗಿರುವ ಕ್ರಮಸಂಖ್ಯೆ: 16ರಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರ 68 ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಪ್ರಸ್ತಾಪಿಸಲಾಗಿದ್ದು, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳನ್ನು ನೇರ ನೇಮಕಾತಿ ಮುಖೇನ ತುಂಬಲು ಅವಕಾಶ ಇರುವುದಿಲ್ಲವಾದ್ದರಿಂದ ಈ ಬಗ್ಗೆ ಮತ್ತೊಮ್ಮೆ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿಕೊಂಡು ಸರಿಪಡಿಸುವ ಷರತ್ತಿಗೊಳಪಡಿಸಿ ಆಯುಕ್ತರ ದಿನಾಂಕ: 07–9–2016ರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 08–9–2016ರ ಸಭೆಯ ನಿರ್ಣಯ.

**ನಿರ್ಣಯ: ಆಯುಕ್ತರ ದಿನಾಂಕ: 07.09.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***14]. ವಿಷಯದ ಸಂಖ್ಯೆ: ತೆಆಸ್ಥಾಸ/75/2016–17***

ಆಯುಕ್ತರ ದಿನಾಂಕ: 25–10–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 800 ಚ.ಮೀ ಮೀರಿದ್ದು, ಪ್ರಸ್ತುತ ಜನಸಂಖ್ಯೆಯು ಸಹ 85 ಲಕ್ಷದಷ್ಟು ಮೀರಿರುತ್ತದೆ. ಅದೇ ರೀತಿ ವಾಹನಗಳ ಸಂಖ್ಯೆಯು ಸಹ 55 ಲಕ್ಷದಷ್ಟಿದ್ದು, ಈ ಕಾರಣದಿಂದ ಹಲವಾರು ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಜಾಮ್ ಆಗುತ್ತಿರುತ್ತದೆ. ಈ ಪ್ರಮುಖ ಜಂಕ್ಷನ್‌ಗಳಲ್ಲಿ ನೂತನವಾಗಿ ಗ್ರೇಡ್ ಸಪರೇಟರ್ ನಿರ್ಮಾಣದ ಯೋಜನೆಯನ್ನು ನಿರೂಪಿಸಿ ಕಾರ್ಯಗತಗೊಳಿಸಲು ಪಾಲಿಕೆಯ ವತಿಯಿಂದ ಹಲವಾರು ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣದ ಯೋಜನೆ ಕೈಗೆತ್ತಿಕೊಳ್ಳಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 2012–13ನೇ ಸಾಲಿನ ರಾಜ್ಯ ಆಯವ್ಯಯ ಭಾಷಣದಲ್ಲಿ ಬಿಬಿಎಂಪಿಗೆ ಸುಮಾರು ರೂ. 1618.00 ಕೋಟಿಗಳ ವೆಚ್ಚದಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದೆಂದು ತೀರ್ಮಾನಿಸಲಾಗಿರುತ್ತದೆ. ಅದರಂತೆ ಮಾನ್ಯ ಆಯುಕ್ತರು ರವರ ಕಛೇರಿ ಆದೇಶ ಸಂ: ಕಾ.ಪಾ.ಅ/ಯೋ.ಕೇಂ–2/ಪಿ.ಆರ್/04/2015–16, ದಿನಾಂಕ: 13.04.2016ರ ಪತ್ರದಲ್ಲಿ ಪಾಲಿಕೆ ವತಿಯಿಂದ 2012–13ನೇ ಸಾಲಿನಲ್ಲಿ ಮತ್ತು 2013–14ನೇ ಸಾಲಿನಲ್ಲಿ ಭರಿಸಬಹುದಾದ ಯೋಜನಾ

ಮೊತ್ತಗಳನ್ನು ನೀಡಲಾಗಿದ್ದು ಇದರಲ್ಲಿ ಹಳೇ ವಿಮಾನ ನಿಲ್ದಾಣ ರಸ್ತೆ, ವೆಲ್ಲಾರ ಜಂಕ್ಷನ್‌ನಿಂದ ವರ್ತೂರು ಕೋಡಿ ಜಂಕ್ಷನ್ ಮಾರ್ಗವಾಗಿ ಮಾರತ್‌ಹಳ್ಳಿ, ಕುಂದಲಹಳ್ಳಿ ವರೆಗೆ ಸಿಗ್ನಲ್ ಮುಕ್ತ ಕಾರಿಡಾರ್‌ನಲ್ಲಿ ಒಟ್ಟು 3 ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್ ಹಾಗೂ ಕಾರಿಡಾರ್ ಅಭಿವೃದ್ಧಿ ಕಾಮಗಾರಿಗಳ ಯೋಜನಾ ಮೊತ್ತ ರೂ. 135.25 ಕೋಟಿಗಳಿಗೆ ಯೋಜನೆಯನ್ನು ತಯಾರಿಸಲಾಗಿದ್ದು, ಈ ಯೋಜನಾ ಮೊತ್ತದಲ್ಲಿ 2012–13ನೇ ಸಾಲಿನಲ್ಲಿ ರೂ. 96.00 ಕೋಟಿಗಳು ಹಾಗೂ 2013–14ನೇ ಸಾಲಿನಲ್ಲಿ ರೂ. 39.25 ಕೋಟಿಗಳ ಅವಶ್ಯಕತೆ ಇರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ: ನಅಇ/356/ಎಂಎನ್‌ವೈ/2012(1), ದಿನಾಂಕ: 10.07.2012 ರಲ್ಲಿ ರೂ. 135.25 ಕೋಟಿಗಳ ವೆಚ್ಚದಲ್ಲಿ ಈ ಕೆಳಕಂಡ ಸಿಗ್ನಲ್ ಮುಕ್ತ ಕಾರಿಡಾರಿನ ಯೋಜನೆಗೆ ಸರ್ಕಾರದಿಂದ ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಪ್ರಸ್ತಾಪಿತ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆಯಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣವನ್ನು ಪ್ರಸ್ತಾವಿಸಲಾಗಿದ್ದು, ಹಳೇ ವಿಮಾನ ನಿಲ್ದಾಣ ರಸ್ತೆಯು ಬೆಂಗಳೂರು ನಗರದ ಪ್ರಮುಖ ರಸ್ತೆಯಾಗಿದ್ದು, ಎಲ್ಲಾ ರೀತಿಯ ಲಘು ಹಾಗೂ ಭಾರಿ ವಾಹನಗಳ ತ್ವರಿತ, ಸುಗಮ, ಸುರಕ್ಷಿತ ವಾಹನ ಸಂಚಾರಕ್ಕಾಗಿ ಮೂರು ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಿ ರಸ್ತೆಯನ್ನು ಮೇಲ್ದರ್ಜೆಗೇರಿಸುವುದು ಅವಶ್ಯಕವಾಗಿರುತ್ತದೆ. ದ್ವಿಮುಖ ಸಂಚಾರದ ಎರಡು ಮುಖ್ಯ ರಸ್ತೆಗಳನ್ನೊಳಗೊಂಡ ರಸ್ತೆಯ ಭಾಗವಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ನಗರೀಕರಣ ಹಾಗೂ ನಗರದ ಎಲ್ಲಾ ಭಾಗಗಳ ಬೆಳವಣಿಗೆಯಿಂದ, ದಿನೇ ದಿನೇ ಏರುತ್ತಿರುವ ವಾಹನಗಳ ಸಂಚಾರದಿಂದ ಈ ರಸ್ತೆ ಭಾಗವೂ ಸಹ ಅತೀವ ವಾಹನ ದಟ್ಟಣೆಗೆ ಒಳಗಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಅನುದಾನದ ಅಡಿಯಲ್ಲಿ "ಎ.ಎಸ್.ಸಿ ಸೆಂಟರ್ ಜಂಕ್ಷನ್ ನಿಂದ ಹೋಪ್ ಫಾರಂ ಜಂಕ್ಷನ್‌ವರೆಗೆ (ಹಳೆ ವಿಮಾನ ನಿಲ್ದಾಣ ರಸ್ತೆ, ಕುಂದಲಹಳ್ಳಿ, ವೈಟ್‌ಫೀಲ್ಡ್ ಮಾರ್ಗವಾಗಿ) ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆಯನ್ನು ರೂ.135.25 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು Lumpsum Turnkey ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ ಮೆ॥ ಆರ್.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ರವರಿಗೆ ಶೇ.14.13 ರಷ್ಟು ಹೆಚ್ಚುವರಿಯಾಗಿ 2013–14 ದರಗಳಿಗೆ ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಪ್ರಸ್ತಾಪಿತ ಕುಂದಲಹಳ್ಳಿ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ನಿರ್ಮಾಣಕ್ಕಾಗಿ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಸರ್ವೇಯರ್ ಅವರಿಂದ ಮೋಜಣಿ ಮಾಡಿಸಿ ಭೂಸ್ವಾಧೀನಗೊಳ್ಳುವ ಹಿಡುವಳಿದಾರರ/ ಸ್ವತ್ತುಗಳ ಪಟ್ಟಿಯನ್ನು ಸಿದ್ದಪಡಿಸಿ ಒಟ್ಟು 21 ಆಸ್ತಿಗಳ ಮಾಲೀಕರಿಗೆ ಟಿ.ಡಿ.ಆರ್‌ನ ತಿಳುವಳಿಕೆ ಪತ್ರಗಳನ್ನು ನೀಡಲಾಗಿರುತ್ತದೆ. ಅದರಂತೆ 7 ಆಸ್ತಿ ಮಾಲೀಕರು ಟಿ.ಡಿ.ಆರ್ ತೆಗೆದುಕೊಳ್ಳಲು ಸಿದ್ಧವಿದ್ದು, ಟಿ.ಡಿ.ಆರ್‌ಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಟಿ.ಡಿ.ಆರ್ ಅರ್ಜಿಗೆ ಸಹಿ ಮಾಡಿ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಮುಂದುವರೆದು ಆಸ್ತಿ ಮಾಲೀಕರು ಸರ್ಕಾರದಿಂದ ಇತ್ತೀಚೆಗೆ ಅನುಮೋದನೆಯಾಗಿರುವ ಟಿ.ಡಿ.ಆರ್ ಅನ್ವಯ ಭೂಸ್ವಾಧೀನಕ್ಕೆ ಸಿದ್ಧವಿರುವುದಾಗಿ ಮೌಖಿಕವಾಗಿ ತಿಳಿಸಿರುತ್ತಾರೆ. ಆದರೆ ಸದರಿ ಹೊಸ ಟಿ.ಡಿ.ಆರ್ ನಿಯಮಗಳು ಇದುವರೆವಿಗೂ ಸರ್ಕಾರದಿಂದ ಅನುಮೋದನೆಯಾಗಿರುವುದಿಲ್ಲ. 14 ಸ್ವತ್ತಿನ ಮಾಲೀಕರು ಟಿ.ಡಿ.ಆರ್ ಮೂಲಕ ಸ್ವತ್ತನ್ನು ನೀಡಲು ಒಪ್ಪದೇ ಇರುವುದರಿಂದ ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 175 ರ ಅಡಿಯಲ್ಲಿ ಖರೀದಿಸಲು ತೀರ್ಮಾನಿಸಲಾಗಿದೆ.

ದಿನಾಂಕ:22.01.2016 ರಂದು ನಡೆದ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗ್ರೇಡ್ ಸಪರೇಟರ್‌ಗಳಿಗೆ ಅವಶ್ಯವಿರುವ ಸ್ವತ್ತುಗಳನ್ನು ಖರೀದಿಸಲು ಯೋಜಿಸಿದ್ದು, ಪಾಲಿಕೆಯಲ್ಲಿ ಆರ್ಥಿಕ

ಮುಗ್ಗಟ್ಟಿನಿಂದ ಬಳಲುತ್ತಿರುವುದರಿಂದ ಸರ್ವಿಸ್ ರಸ್ತೆಗಳನ್ನು ಸಧ್ಯಕ್ಕೆ 5.50 ಮತ್ತು 7.50 ಮೀ. (ಐ.ಆರ್.ಸಿ ರೀತ್ಯಾ ಮಧ್ಯಂತರ ಲೇನ್ ಅಥವಾ ಎರಡು ಲೇನ್) ಅಗಲದಿಂದ 3.50 ಮೀ. (ಐ.ಆರ್.ಸಿ ರೀತ್ಯಾ ಒಂದು ಲೇನ್) ಅಗಲದ ರಸ್ತೆಯನ್ನು ಮತ್ತು 1.50 ಮೀ. ಅಗಲದ ಪಾದಚಾರಿ ಮಾರ್ಗ / ಮಳೆ ನೀರು ಚರಂಡಿ ಸಹಿತ ಅಭಿವೃದ್ಧಿ ಪಡಿಸಲು ತೀರ್ಮಾನಿಸಲಾಗಿದ್ದು, ಭೂಸ್ವಾಧೀನ ಪ್ರಸ್ತಾವನೆ ಸಲ್ಲಿಸಲು ಸೂಚಿಸ್‌ಲಾಗಿರುತ್ತದೆ. ಇದರಂತೆ ಈ ಗ್ರೇಡ್ ಸಪರೇಟರ್‌ಗಳಿಗೆ ಭೂಸ್ವಾಧೀನಕ್ಕೆ ಬೇಕಾಗಿರುವ ಮೊತ್ತವನ್ನು ಸರ್ಕಾರದಿಂದ ಭರಿಸಲು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಮಾನ್ಯ ಆಯುಕ್ತರು ಪತ್ರ ಸಂಖ್ಯೆ: ಆಯುಕ್ತರು/ಪಿ.ಆರ್/2675/2015-16 ದಿನಾಂಕ:05.03.2016 ರಲ್ಲಿ ಕೋರಿರುತ್ತಾರೆ.

ಮುಂದುವರೆದು ಈ ಗ್ರೇಡ್ ಸಪರೇಟರ್‌ಗಳ ನಿರ್ಮಾಣ ಯೋಜನೆಗಳಿಗೆ ಬೇಕಾಗಿರುವ ಸ್ವತ್ತುಗಳನ್ನು ಭೂಸ್ವಾಧೀನ ಮಾಡಿಕೊಳ್ಳು ಭೂಸ್ವಾಧೀನ ಕಾಯ್ದೆ ಅಧಿನಿಯಮ-2013 ರಂತೆ ಕಾರ್ಯ ನಡೆಸಿ ಸ್ವತ್ತನ್ನು ಪಡೆದುಕೊಳ್ಳಲು ಬಹು ಸಮಯವಾಗುವುದರಿಂದ ಮಾನ್ಯ ಆಯುಕ್ತರು ರವರು ಪತ್ರ ಸಂಖ್ಯೆ: ಕಾ.ಪಾ.ಅ/ಯೋ.ಕೇಂ-2/ಪಿ.ಆರ್/04/2015-16 ದಿನಾಂಕ:13.04.2016 ರಲ್ಲಿ ಕಛೇರಿ ಆದೇಶ ನೀಡಿ ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 175 ರಂತೆ ಬೇಕಾಗಿರುವ ಖರೀದಿಸಲು ಕೇಂದ್ರ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಕಾರಿಡಾರ್‌ನ ಭಾಗವಾದ ಕುಂದಲಹಳ್ಳಿ ಜಂಕ್ಷನ್‌ನಲ್ಲಿ ನಿರ್ಮಿಸಬೇಕಾಗಿರುವ ದ್ವಿಪಥದ ಕೆಳಸೇತುವೆಯ ವಿವರ ಕೆಳಕಂಡಿರುತ್ತದೆ.

**<u>ಕುಂದಲಹಳ್ಳಿ ರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣದ ವಿವರ</u>**

| | |
|---|---|
| ಗ್ರೇಡ್ ಸೆಪರೇಟರ್ ಉದ್ದ (Underpass) | 311.14 ಮೀ. |
| ಗ್ರೇಡ್ ಸೆಪರೇಟರ್ ಅಪ್ರೋಚ್‌ಸ್ (Towards Marathalli Junction) ಉದ್ದ | 102.74 ಮೀ. |
| ಗ್ರೇಡ್ ಸೆಪರೇಟರ್ ಅಪ್ರೋಚ್‌ಸ್ (Towards White Field Junction) ಉದ್ದ | 158.40 ಮೀ. |
| ಗ್ರೇಡ್ ಸೆಪರೇಟರ್ ಒಟ್ಟು ಅಗಲ | 7.5 ಮೀ (ಪ್ರತಿ ದಿಕ್ಕಿನಲ್ಲಿ) (Two way, Bi-Directional 7.5 Carriage Way on either side) |
| ಲೇನ್‌ಗಳ ಸಂಖ್ಯೆ | 4 ಸಂಖ್ಯೆ |
| ಸೇವಾ ರಸ್ತೆಯ ಅಗಲ 7.50 ಮೀ ಮತ್ತು ಪಾದಚಾರಿ ರಸ್ತೆ ಅಗಲ 2.50 ಮೀಟರ್ ಗೆ, ಪರಿಗಣಿಸಿದರೆ ಬೇಕಾಗುವ ಭೂಸ್ವಾಧೀನಪಡಿಸಬೇಕಾದ ಸ್ವತ್ತಿನ ವಿಸ್ತೀರ್ಣ | 6306.78 ಚ.ಮೀ |
| ಸೇವಾ ರಸ್ತೆಯ ಅಗಲ 3.50 ಮೀ ಮತ್ತು ಪಾದಚಾರಿ ರಸ್ತೆ ಅಗಲ 1.50 ಮೀಟರ್ ಗೆ, ಪರಿಗಣಿಸಿದರೆ ಬೇಕಾಗುವ ಭೂಸ್ವಾಧೀನಪಡಿಸಬೇಕಾದ ಸ್ವತ್ತಿನ ವಿಸ್ತೀರ್ಣ | 2578.00 ಚ.ಮೀ |
| ಸೇವಾ ರಸ್ತೆಯ ಅಗಲ | 7.50 ಮೀ ಆದರೆ ಭೂಸ್ವಾಧೀನ ವೆಚ್ಚವನ್ನು ಕಡಿತಗೊಳಿಸಲು 3.50ಮೀಗೆ, ಕಡಿತಗೊಳಿಸಲಾಗಿದೆ. |
| ಪಾದಚಾರಿ ರಸ್ತೆಯ ಅಗಲ | 2.50 ಮೀಟರ್ ಆದರೆ ಭೂಸ್ವಾಧೀನ ವೆಚ್ಚವನ್ನು ಕಡಿತಗೊಳಿಸಲು 1.50ಮೀ ಗೆ ಕಡಿತಗೊಳಿಸಲಾಗಿದೆ. |
| ಭೂಸ್ವಾಧೀನ Area (approximate) | 7.50 ಸೇವಾ ರಸ್ತೆ +2.50 ಮೀ ಪಾದಚಾರಿ ರಸ್ತೆ ಅಗಲವಿದ್ದಾಗ 6306.78 ಚ.ಮೀ. 3.50 ಸೇವಾ ರಸ್ತೆ +1.50 ಮೀ ಪಾದಚಾರಿ ರಸ್ತೆ ಅಗಲವಿದ್ದಾಗ 2578.00 ಚ.ಮೀ. (21 ಸ್ವತ್ತುಗಳು) |

ಸದರಿ ಅಂಡರ್‌ಪಾಸ್‌ನ ಎರಡೂ ಬದಿಯಲ್ಲೂ ಖಾಸಗಿ ಭೂಮಿಯು ಅವಶ್ಯವಿರುತ್ತದೆ. ಭೂಸ್ವಾಧೀನಕ್ಕಾಗಿ ಮೇಲೆ ಉಲ್ಲೇಖಿಸಿರುವ ಕೇಂದ್ರ ಸಮಿತಿಯು ಹಾಗೂ ಭೂಮಾಲೀಕರೊಂದಿಗೆ ಎರಡು ಬಾರಿ ಸಭೆ ನಡೆಸಿ ದಿನಾಂಕ: 21.06.2016 ರಂದು ನಡೆದ ಸಭೆಯಲ್ಲಿ ಭೂಮಾಲೀಕರಿಗೆ ತಾವು ಗ್ರೇಡ್ ಸಪರೇಟರ್‌ಗೆ ಬಿಟ್ಟುಕೊಡುವ ಭೂಮಿಗೆ ಮಾರ್ಗದರ್ಶಿ ದರ ಹಾಗೂ ಶೇ.63.33 ರಷ್ಟು ಹೆಚ್ಚುವರಿ ಅಧಿಕ ಮೊತ್ತವನ್ನು ನೀಡಲು ನಿರ್ಣಹಿಸಲಾಗಿದೆ. ಹಾಗೂ ಇದರಂತೆ ಮಾರ್ಗದರ್ಶಿ ಬೆಲೆಯು ಸರ್ಕಾರದ ಆದೇಶ ಸಂಖ್ಯೆ: ಸಿ.ವಿ.ಸಿ/25/2014–15, ಬೆಂಗಳೂರು ದಿನಾಂಕ:28.03.2016 ರಂತೆ ಸದರಿ ಸ್ಥಳದಲ್ಲಿ ಪ್ರತಿ ಚದರ ಮೀ.ಗೆ, ರೂ.66,900/– (ಪ್ರತಿ ಚ.ಅಡಿಗೆ, ರೂ.5500.00) ನಿಗಧಿಯಾಗಿದ್ದು, ಶೇ.63.33 ರಂತೆ ಹೆಚ್ಚುವರಿ ದರ ನೀಡಿದಲ್ಲಿ ಭೂಮಾಲೀಕರಿಗೆ ರೂ.96,876/– ಪ್ರತಿ.ಚ.ಮೀ ಗೆ, (ರೂ.9000.00 ಪ್ರತಿ ಚ.ಅಡಿಗೆ) ನೀಡಬೇಕಿರುತ್ತದೆ.

ಪ್ರಸ್ತುತ ಸದರಿ ಗ್ರೇಡ್ ಸಪರೇಟರ್‌ಗಾಗಿ ಖಾಸಗಿ ಭೂಮಿಗಳ ಭೂಸ್ವಾಧೀನ ಮಾಡಿಕೊಳ್ಳುವುದು ಅವಶ್ಯವಿದ್ದು, ಸದರಿ ಸ್ವತ್ತುಗಳು ವಿವರ ಕೆಳ ಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ಸರ್ವೆ ನಂ / ಖಾತಾ ನಂ | ಮಾಲೀಕರುಗಳ ಹೆಸರು | ಭೂಸ್ವಾಧೀನಕ್ಕೆಬೇಕಾದ ಸ್ವತ್ತಿನ ವಿಸ್ತೀರ್ಣ ಚ.ಮೀ (ಚ.ಅಡಿಗಳಲ್ಲಿ.) |
|---|---|---|---|---|
| 1 | ಮುನ್ನೇಕೊಳಲು | 40 | ಶ್ರೀ. ಆರ್. ಭೂಪಾಲ ರೆಡ್ಡಿ,<br>ಶ್ರೀ. ಎನ್ ಮುನಿರಾಜು<br>ಶ್ರೀ. ಶ್ರೀಧರ್ | 34,768.00 ಚ.ಮೀ (3230.00 ಚ.ಅ.) |
| 2 | ತೂಬರಹಳ್ಳಿ | 5/1 | ಶ್ರೀಮತಿ. ಪದ್ಮ ಜೆ. ರೆಡ್ಡಿ | 34,768.00 ಚ.ಮೀ (3230.00 ಚ.ಅ.) |
| 3 | ತೂಬರಹಳ್ಳಿ | 5/2 | ಶ್ರೀ/ ಶ್ರೀಮತಿ. ಎಂ. ಸತೀಶ್, ಎಂ. ಅರುಣ್‌ಕುಮಾರ್ ವಿ. ಮುನಿರೆಡ್ಡಿ,<br>ಎಂ. ವೈಜಯಂತಿಮಾಲ ಕೋಂ ಆರ್. ಸುಭಾಷ್,<br>ಎಂ. ಅನ್ನಪೂರ್ಣ ಕೋ ಪಿ. ರವಿಶಂಕರ್,<br>ಎಂ. ಧನಲಕ್ಷ್ಮಿ ಕೋಂ ಕೆ.ಎಂ. ಪ್ರಭಾಕರ್,<br>ಎಂ. ಸತ್ಯವತಿ ಬಿನ್ ವಿ. ಮುನಿರೆಡ್ಡಿ | 3477.00 ಚ.ಮೀ (323.00 ಚ.ಅ.) |
| 4 | ತೂಬರಹಳ್ಳಿ | 5/4 | ಶ್ರೀಮತಿ ಎಂ. ವೈಜಯಂತಿಮಾಲ | |
| 5 | ತೂಬರಹಳ್ಳಿ | 5/5 | ಶ್ರೀ. ಅರುಣ್ ಕುಮಾರ್ ಎಂ | |
| 6 | ತೂಬರಹಳ್ಳಿ | 5/3 | ಶ್ರೀ. ಎಸ್. ಕೃಷ್ಣಪ್ಪ ರೆಡ್ಡಿ | 6954.00 ಚ.ಮೀ (646.00 ಚ.ಅ.) |
| 7 | ಮುನ್ನೇಕೊಳಲು | 42/4 | ಶ್ರೀ. ಹೆಚ್. ಯಶವಂತ ಶೆಣೈ, ಕೆ.ಎನ್ ಯಲ್ಲಪ್ಪ | 32,443.00 ಚ.ಮೀ (3014.00 ಚ.ಅ.) |
| 8 | ಮುನ್ನೇಕೊಳಲು | 43/3 | ಶ್ರೀ. ಕೆ. ವಿಜಯ್‌ಕುಮಾರ್ ಬಿನ್ ವೈ ಕೃಷ್ಣಾರೆಡ್ಡಿ | 12,745.00 ಚ.ಮೀ (1184.00 ಚ.ಅ.) |
| 9 | ಮುನ್ನೇಕೊಳಲು | 43/1 | ಶ್ರೀ. ಎಸ್.ಎನ್.ಸುಬ್ಬಾ ರೆಡ್ಡಿ | 14,489.00 ಚ.ಮೀ (1346.00 ಚ.ಅ.) |
| 10 | ಮುನ್ನೇಕೊಳಲು | 43/2 | ಶ್ರೀ. ವಿ. ಮುನಿರೆಡ್ಡಿ | 14,489.00 ಚ.ಮೀ (1346.00 ಚ.ಅ.) |
| 11 | ಮುನ್ನೇಕೊಳಲು | 43/1 | ಶ್ರೀಮತಿ. ಹೆಚ್.ಎ. ಸಾಕಮ್ಮ W/o ಎಲ್. ಶಾಮಯ್ಯ | 15,399.00 ಚ.ಮೀ (430.55 ಚ.ಅ.) |
| 12 | ಮುನ್ನೇಕೊಳಲು | 43/94/1 | ಶ್ರೀಮತಿ. ಅನುರಾಧ | 15,399.00 ಚ.ಮೀ (430.55 ಚ.ಅ.) |

| | | | | |
|---|---|---|---|---|
| 13 | ಮುನ್ನೇಕೊಳಲು | 43/1 | ಶ್ರೀ. ವಿ. ಮುನಿರೆಡ್ಡಿ | 6373.00 ಚ.ಮೀ (592.01 ಚ.ಅ.) |
| 14 | ತೂಬರಹಳ್ಳಿ | 68 | ಶ್ರೀಮತಿ ವೇದವತಿ, ಶ್ರೀ. ವೆಂಕಟೇಶ ರೆಡ್ಡಿ<br>ಶ್ರೀ. ಮುನಿರೆಡ್ಡಿ<br>ಶ್ರೀ. ಡಿ. ಸುಧಾಕರ ರೆಡ್ಡಿ ಮತ್ತು ಇತರರು<br>ಶ್ರೀಮತಿ ಎನ್.ಎಂ. ಪದ್ಮಜ | 42,870.00 ಚ.ಮೀ (3982.64 ಚ.ಅ.) |

ಮೇಲ್ಕಂಡ ಭೂಸ್ವಾಧೀನ ವಿವರಗಳು ಪ್ರಸ್ತುತ ಲಭ್ಯವಿರುವ ಹಾಗೂ ಭೂಮಾಲೀಕರು ನೀಡಿರುವ ದಾಖಲೆಗಳಂತೆ ತಯಾರಿಸಲಾಗಿದೆ. ಈ ಗ್ರೇಡ್ ಸಪರೇಟರ್ ನಿರ್ಮಾಣಕ್ಕೆ ಒಟ್ಟು 2578.00 ಚ.ಮೀ (27750.00 ಚ.ಅಡಿ) ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದ್ದು, ಭೂಸ್ವಾಧೀನ ವೆಚ್ಚವು ಸಮಿತಿಯ ಶಿಫಾರಸ್ಸಿನಂತೆ .96,876/- ಪ್ರತಿ.ಚ.ಮೀ ಗೆ, (ರೂ.9000.00 ಪ್ರತಿ ಚ.ಅಡಿಗೆ) ರೂ. 24.975 ಕೋಟಿಗಳ ಅವಶ್ಯವಿರುತ್ತದೆ. ಮೇಲ್ಕಂಡ ಕಾಮಗಾರಿಯು ವಿಳಂಬವಾಗಿರುವುದರಿಂದ ಪ್ರಸ್ತಾಪಿತ ಸ್ವತ್ತನ್ನು ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರ ಕಾಯ್ದೆ ಅಡಿಯಲ್ಲಿ ಭೂ ಖರೀದಿಸುವುದು ಈ ಕೆಳಕಂಡ ಕಾರಣಗಳಿಗೆ ಅವಶ್ಯಕತೆಯಿರುತ್ತದೆ.

ಈಗಾಗಲೇ ಕಾರಿಡಾರ್‌ನ ಕಾಮಗಾರಿಯು ಶೇ.70 ರಷ್ಟು ಪೂರ್ಣಗೊಂಡಿದ್ದು, ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಲು ಪ್ರಶ್ನಿತ ಜಾಗವು ಅನಿವಾರ್ಯವಾದ್ದರಿಂದ ಭೂಸ್ವಾಧೀನ ಪಡಿಸಿಕೊಳ್ಳಲೆ ಬೇಕಾಗಿರುತ್ತದೆ.

ಕುಂದಲಹಳ್ಳಿ ಜಂಕ್ಷನ್ ನಲ್ಲಿ ಸಿಗ್ನಲ್ ಮುಕ್ತ ಕಾರಿಡಾರ್ ಅನ್ವಯ ಜಂಕ್ಷನ್ ಅನ್ನು ಸಿಗ್ನಲ್ ಮುಕ್ತ ಮಾಡಲು ಕೆಳಸೇತುವೆ ನಿರ್ಮಾಣ ಮಾಡುವುದು ಅನಿವಾರ್ಯವಾಗಿರುತ್ತದೆ.

ಸದರಿ ಅಂಡರ್‌ಪಾಸ್ ನಿರ್ಮಾಣ ಸಂಬಂಧ ಈಗಾಗಲೇ ಪ್ರೀ-ಕ್ಯಾಸ್ಟ್ ಎಲಿಮೆಂಟ್‌ಗಳನ್ನು ನಿರ್ಮಾಣ ಮಾಡಲಾಗಿದ್ದು, ಸದರಿ ಜಾಗದ ಸ್ವತ್ತುಗಳನ್ನು ಭೂಸ್ವಾಧೀನ ಪಡೆಸಿದಲ್ಲಿ, ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಬಹುದಾಗಿದೆ.

ಹೊಸ ಭೂಸ್ವಾಧೀನ ಕಾಯ್ದೆ 2013 ರ ರೀತಿಯಲ್ಲಿ ಭೂಸ್ವಾಧೀನ ವೆಚ್ಚವು ದುಬಾರಿಯಾಗುವ ಹಿನ್ನಲೆಯಲ್ಲಿ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರ ಅಡಿಯಲ್ಲಿ ಭೂಮಿಯನ್ನು ನೇರ ಖರೀದಿ ಮಾಡಲು ಉದ್ದೇಶಿಸಲಾಗಿದ್ದು, ಸಾರ್ವಜನಿಕರ ಹಿತದೃಷ್ಠಿಯಿಂದ ಭೂಸ್ವಾಧೀನವನ್ನು ಪಡಿಸಿಕೊಳ್ಳಲೆ ಬೇಕಾಗಿರುತ್ತದೆ.

ಖಾಸಗಿ ಭೂಮಾಲೀಕರೊಂದಿಗೆ ಅಂತಿಮಗೊಳಿಸುವ ಮೊತ್ತವು 2013ರ ಭೂಸ್ವಾಧೀನ ಕಾಯ್ದೆಗಿಂತಲೂ ಕಡಿಮೆ ಇದ್ದು, ಕಾಮಗಾರಿಯನ್ನು ನಿರ್ಧಿಷ್ಠ ಅವಧಿಯಲ್ಲಿ ಪೂರ್ಣಗೊಳಿಸಲು ಅನುವುಮಾಡಿಕೊಡುತ್ತದೆ. ಸದರಿ ಕೇಂದ್ರ ಸಮಿತಿಯಲ್ಲಿ ನಿರ್ಣಹಿಸಿದಂತೆ ಖಾಸಗಿ ಭೂಮಾಲೀಕರು ಕೋರಿರುವ ರೂ.24.975 ಕೋಟಿಗಳು ಹಾಗೂ ಭೂಸ್ವಾಧೀನವಾಗುವ ವಾಣಿಜ್ಯೇತರ ಪ್ರದೇಶಗಳಿಗೆ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಿಕೊಡಬೇಕೆಂದು ಸಮಿತಿಯನ್ನು ಕೋರಿದ್ದು, ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಂತೆ ಖಾಸಗಿ ಭೂಮಾಲೀಕರಿಂದ ನೇರವಾಗಿ ಭೂ ಖರೀದಿ ಮಾಡಲು ಅನುಮೋದನೆ ನೀಡುವ ಅಧಿಕಾರವು ಘನ ಸರ್ಕಾರದ ಕಾರ್ಯವ್ಯಾಪ್ತಿಯಲ್ಲಿದ್ದು, ಮೊದಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಕೆ ಸಭೆಯ ಅನುಮೋದನೆ ಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಳಕಂಡ ಅಂಶಗಳನ್ನು ಮಂಡಿಸಿದೆ.

ಕುಂದಲಹಳ್ಳಿ ಜಂಕ್ಷನ್ ನಲ್ಲಿ ಕೆಳಸೇತುವೆ ನಿರ್ಮಾಣಕ್ಕಾಗಿ ಖಾಸಗಿ ಭೂಮಾಲೀಕರಿಂದ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 175 ರಂತೆ ಮೇಲೆ ತೋರಿಸಿರುವ ಕೋಷ್ಟಕದ (Tabular Column) ಹಾಗೂ ಇತರೆ ವಾರಸುದಾರರಿಂದ ಭೂಸ್ವಾಧೀನ ಪಡಿಸಿಕೊಳ್ಳಲು ಅನುಮೋದನೆ.

ಹಳೆ ವಿಮಾನ ನಿಲ್ದಾಣ ರಸ್ತೆ ಸಿಗ್ನಲ್ ಮುಕ್ತ ಕಾರಿಡಾರ್‌ನ ಕಾರಿಡಾರ್ ಕಾಮಗಾರಿಯು ಶೇ.70 ಎಷ್ಟು ಪೂರ್ಣಗೊಂಡಿರುವುದರಿಂದ ಹಾಗೂ ಕುಂದಲಹಳ್ಳಿ ಕೆಳಸೇತುವೆ ಕಾಮಗಾರಿಯನ್ನು ಪ್ರಾರಂಭಿಸಲು ಖಾಸಗಿ ಭೂಮಾಲೀಕರಿಂದ ಭೂಮಿಯು ಜರೂರಾಗಿ ಬೇಕಾಗಿರುವುದರಿಂದ ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಖಾಸಗಿ ಭೂಮಾಲೀಕರಿಗೆ ದಾಖಲೆಗಳನ್ನು ಪರಿಶೀಲಿಸಿ ದೃಡಪಡಿಸಿಕೊಂಡು ಹಣ ಪಾವತಿಸಲು ಹಾಗೂ ಉಪ ನೊಂದಣಾಧಿಕಾರಿಗಳು (ವರ್ತೂರು), ರವರ ಕಛೇರಿಯಲ್ಲಿ ಭೂಮಿ ನೊಂದಾವಣಿ ಮಾಡಿಕೊಳ್ಳಲು ಮತ್ತು ಖರೀದಿಸಿದ ಭೂಮಿಯಲ್ಲಿ ಕೆಳಸೇತುವೆ ನಿರ್ಮಾಣ ಕಾಮಗಾರಿಯನ್ನು ಮುಂದುವರೆಸಲು ಅನುಮೋದನೆ.

ಮೇಲಿನ ಅಂಶಗಳ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 25.10.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***15]. ವಿಷಯದ ಸಂಖ್ಯೆ: ತೆಆಸ್ಥಾಸ/76/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04-11-2016ರಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 108, ಸ್ವತ್ತಿನ ಸಂಖ್ಯೆ 1036-ಎ, 60ನೇ ಅಡ್ಡರಸ್ತೆ, ಡಾ॥ ದ.ರಾ. ಬೇಂದ್ರೆ ರಸ್ತೆ (East of chord road), 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಇಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 6.25 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ಪಶ್ಚಿಮ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: **P- 0055 "Encroachment clearance Expenses ( Demolition charges)" Budget Book Page No. 111** (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **149.25** | **0.00** | **0.75** | **6.25** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 6.25 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ

ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 6.25 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04.11.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***16]. ವಿಷಯದ ಸಂಖ್ಯೆ: ತೆಆಸ್ಥಾಸ/77/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04–11–2016ರಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 107, ಶಿವನಗರ ವ್ಯಾಪ್ತಿಯ ಮನೆ ಸಂಖ್ಯೆ 855/17, 15ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10 ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 5.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ಪಶ್ಚಿಮ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111** (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **149.25** | **0.00** | **0.75** | **5.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 5.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 5.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04.11.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***17]. ವಿಷಯದ ಸಂಖ್ಯೆ: ತೆಆಸ್ಥಾಸ/78/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04–11–2016ರಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 99, ಸ್ವತ್ತಿನ ಸಂಖ್ಯೆ 679/1, 11ನೇ ಬಿ ಮುಖ್ಯ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10 ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 5.25 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ಪಶ್ಚಿಮ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: **P- 0055 "Encroachment clearance Expenses ( Demolition charges)" Budget Book Page No. 111** (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **149.25** | **0.00** | **0.75** | **5.25** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 5.25 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 5.25 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04.11.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***18]. ವಿಷಯದ ಸಂಖ್ಯೆ: ತೆಆಸ್ಥಾಸ/79/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22–09–2016ರಲ್ಲಿ ಪ್ರಸ್ತಾಪಿಸಿರುವಂತೆ, ಜಂಟಿ ಆಯುಕ್ತರು (SWM) ರವರು ದಕ್ಷಿಣ ವಲಯದ Spraying of Bio- Enzyment for reduction of foul odour and Leachate at solid waste Management at S. Bingipura Sy. No. 179 from 11-12-2014 to 09-4-2015 (120 days) ಕಾಮಗಾರಿಯನ್ನು ನಿರ್ವಹಿಸಲಾಗಿದ್ದು, ಕಾಮಗಾರಿಯ ಅಂದಾಜು ಮೊತ್ತ ರೂ. 95.90 ಲಕ್ಷಗಳಿಗೆ ಕೇಂದ್ರ ಸರ್ಕಾರದ ಯೋಜನೆ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಬಿಡುಗಡೆಯಾಗಿರುವ ರೂ. 41.15 ಕೋಟಿಗಳಲ್ಲಿ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಲಭ್ಯವಿಲ್ಲದ ಬಗ್ಗೆ ಚರ್ಚಿಸಲಾಗಿ, ಅವಶ್ಯಕತೆಗೆ ಅನುಗುಣವಾಗಿ SWM ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಸಿದ್ದಪಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮಾನ್ಯ ಆಯುಕ್ತರು ಕಾಮಗಾರಿ ಕೈಗೊಳ್ಳಲು ಜಾಬ್‌ಸಂಖ್ಯೆ ನೀಡಲು ಅನುಮೋದನೆ ನೀಡಿರುತ್ತಾರೆ.

2016–17ರ ಆಯವ್ಯಯದ (ಪುಟಸಂಖ್ಯೆ–180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು–ಸ್ವಚ್ಚ ಭಾರತ್ ಅಭಿಯಾನದ ಕಾಮಗಾರಿಗಳು ಪಿ–3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ರೂ. 41.15 ಕೋಟಿ ಅನುದಾನವನ್ನು ಈಗಾಗಲೆ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ, ಲೆಕ್ಕಶೀರ್ಷಿಕೆ ಪಿ–3112 ಅಡಿ ಅನುದಾನವನ್ನು ಅಳವಡಿಸಿಕೊಂಡು ರೂ. 949.78 ಲಕ್ಷಗಳಿಗೆ ಈಗಾಗಲೇ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಸದರಿ ಪ್ರಸ್ತಾವನೆ ಮೊತ್ತ ರೂ. 95.90 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ಆಯವ್ಯಯದಲ್ಲಿ ಅನುದಾನದ ಕೊರತೆ ಇರುತ್ತದೆ. ಆಯವ್ಯಯದಲ್ಲಿ ಕೊರತೆ ಅನುದಾನಕ್ಕೆ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಚ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಲೆಕ್ಕಶೀರ್ಷಿಕೆ ಪಿ–3112 ಅಡಿ ರೂ. 95.90 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು 310–17–000075 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22.09.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***19]. ವಿಷಯದ ಸಂಖ್ಯೆ: ತೆಆಸ್ಥಾಸ/80/2016–17***

ಆಯುಕ್ತರ ದಿನಾಂಕ: 19–08–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ ಯೋಜನೆಯನ್ನು ಅನುಷ್ಠಾನಗೊಳಿಸಲು ಐಇಸಿ ಹಾಗೂ ಸಾಮರ್ಥ್ಯ ನಿರ್ಮಾಣದ ಚಟುವಟಿಕೆಗಳಿಗಾಗಿ ರೂ.1,50,00,000/– (ಒಂದು ಕೋಟಿ ಐವತ್ತು ಲಕ್ಷಗಳನ್ನು ಕೇಂದ್ರ ಸರ್ಕಾರವು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ರಾಜ್ಯ ಸಕಾರಕ್ಕೆ ಬಿಡುಗಡೆ ಮಾಡಿರುವ ನಿಧಿಯಿಂದ ಉಲ್ಲೇಖಿತ ಆದೇಶ (1)ರ ರೀತ್ಯಾ ಬಿಬಿಎಂಪಿ ಬಿಡುಗಡೆಗೊಳಿಸಲಾಗಿದೆ. ಎರಡನೇ ಹಂತದಲ್ಲಿ ರೂ.30,00,000/– (ಮೂವತ್ತು ಲಕ್ಷ ರೂಪಾಯಿಗಳು) ಗಳನ್ನು ಐಇಸಿ ಚಟುವಟಿಕೆ ನಡೆಸಲು ಪಾಲಿಕೆಗೆ ಉಲ್ಲೇಖ (2)ರ ರೀತ್ಯಾ ಬಿಡುಗಡೆಗೊಳಿಸಲಾಗಿದೆ. (ಒಟ್ಟಾರೆ ರೂ.1,80,00,000/–, ಒಂದು ಕೋಟಿ ಎಂಭತ್ತು ಲಕ್ಷ ರೂಪಾಯಿಗಳು)

ಈಗಾಗಲೇ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಘನತ್ಯಾಜ್ಯ ನಿರ್ವಹಣೆ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ದಿನ ಪತ್ರಿಕೆಗಳಲ್ಲಿ ಜಾಹೀರಾತು, ವಾಹನ ನಿಲ್ದಾಣದ ಶೆಲ್ಟರ್‌ಗಳಲ್ಲಿ ಜಾಹೀರಾತು ಹಾಗೂ ಬೀದಿ ನಾಟಕಗಳನ್ನು ಏರ್ಪಡಿಸಿ ಬಿಬಿಎಂಪಿ ಖಾತೆಯಿಂದ ಹಣ ಖರ್ಚು ಮಾಡಿದ್ದು ವಿವರಗಳು ಈ ಕೆಳಕಂಡಂತಿದೆ:

| | | |
|---|---|---|
| 1. | ದಿನ ಪತ್ರಿಕೆಗಳಲ್ಲಿ ಜಾಹೀರಾತಿಗೆ | – ರೂ.110 ಲಕ್ಷಗಳು |
| 2. | ಬಸ್ ನಿಲ್ದಾಣಗಳಲ್ಲಿ ಜಾಹೀರಾತಿಗಾಗಿ | – ರೂ. 13 ಲಕ್ಷಗಳು |
| 3. | ಬೀದಿ ನಾಟಕಕ್ಕೆ | – ರೂ. 51 ಲಕ್ಷಗಳು |
| | **ಒಟ್ಟು** | **– ರೂ.174 ಲಕ್ಷಗಳು** |

**(ಒಟ್ಟು ನೂರಾ ಎಪ್ಪತ್ತಾನಾಲ್ಕು ಲಕ್ಷಗಳು ಮಾತ್ರ)**

ಇದೀಗ ಸ್ವಚ್ಛ ಭಾರತ್ ಅಭಿಯಾನದಡಿ ಐಇಸಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ, ಸಾಮರ್ಥ್ಯ ನಿರ್ಮಾಣ, ಆಡಳಿತಾತ್ಮಕ ಮತ್ತು ಕಛೇರಿ ವೆಚ್ಚಗಳಿಗಾಗಿ ಬಂದಿರುವ 1.80 ಕೋಟಿ ರೂ.ಗಳ ಲೆಕ್ಕದಲ್ಲಿ ಪಾಲಿಕೆಯಿಂದ ಖರ್ಚು ಮಾಡಿರುವ ಹಣವನ್ನು ಮರುಪಾವತಿ ಮಾಡಿಕೊಂಡು ಲೆಕ್ಕಹೊಂದಾಣಿಕೆ ಮಾಡಿಕೊಳ್ಳಲು ಹಾಗೂ ಬಳಕೆ ಪ್ರಮಾಣ ಪತ್ರವನ್ನು ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

***20]. ವಿಷಯದ ಸಂಖ್ಯೆ: ತೆಆಸ್ಥಾಸ/81/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13–10–2016ರಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಸಂಸತ್ ಸದಸ್ಯರ ಕ್ಷೇತ್ರಾಭಿವೃದ್ಧಿ ಯೋಜನೆಯಡಿ "Construction of Operation Theatre and other Development works for Banashankari Referral Hospital Ganesh mandir ward no 165" ಕಾಮಗಾರಿಯ ಅಂದಾಜು ಮೊತ್ತ ರೂ. 9,97,987–00 ಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಅಧಿಕೃತ ಜ್ಞಾಪನ ಸಂಖ್ಯೆ ಎಂ.ಪಿ.ಎಲ್ಎಡಿಎಸ್/ಸಿ.ಆರ್ 7/ 2015–16 ದಿನಾಂಕ 18–05–2016 ರಲ್ಲಿ 18 ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಮಾನ್ಯ ಸಂಸತ್ ಸದಸ್ಯರ ಕ್ಷೇತ್ರಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ "ಸಂಸತ್ ಸದಸ್ಯರ ಅನುದಾನದ ಕಾಮಗಾರಿಗಳು ಪಿ0580" ಅಡಿ ಪರಿಗಣಿಸಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರು ಅನುದಾನದ ಮೊತ್ತದ ಶೇ 50 ರಷ್ಟು ಮೊತ್ತ ರೂ. 4,98,993–00 ಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರು ಚೆಕ್ ಸಂಖ್ಯೆ 814468/ ದಿನಾಂಕ 30–6–2016 ರಲ್ಲಿ ಅನುದಾನವನ್ನು ಬಿಡುಗಡೆಗೊಳಿಸಿರುತ್ತಾರೆ ಎಂದು ದಾಖಲಿಸಿರುತ್ತಾರೆ. 2016–17 ನೇ ಸಾಲಿನ ಆಯವ್ಯಯದಲ್ಲಿ "ಸಂಸತ್ ಸದಸ್ಯರ ಅನುದಾನದ ಕಾಮಗಾರಿಗಳು ಪಿ0580" ರ ಚಾಲ್ತಿ ಕಾಮಗಾರಿಗಳು ಅಡಿ ರೂ. 4.00 ಲಕ್ಷಗಳ ಅನುದಾನವನ್ನು ಮಾತ್ರ ಮೀಸಲಿರಿಸಿದೆ. ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಡಿ ಬಿಡುಗಡೆಯಾಗಿರುವ ಮೊತ್ತ ರೂ. 9,97,987–00 ಗಳಿದ್ದು, ಲೆಕ್ಕಶೀರ್ಷಿಕೆ ಪಿ–0580 ಅಡಿ ರೂ. 4.00 ಲಕ್ಷಗಳನ್ನು ಮೀಸಲಿರಿಸಿರುವುದರಿಂದ ಜಾಬ್‌ಸಂಖ್ಯೆ ನೀಡಲು ಅನುದಾನದ ಕೊರತೆ ಇರುತ್ತದೆ. ಮಾನ್ಯ ಆಯುಕ್ತರವರ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0580 ಅಡಿ ಕೊರತೆ ಇರುವ ರೂ. 5,57,987–00 ಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದೆ. ಸರ್ಕಾರದಿಂದ ಅನುದಾನ ಬಿಡುಗಡೆಗೊಂಡಿರುವುದರಿಂದ 2016–17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0580 ಅಡಿ ರೂ. 5,57,987–00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.10.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *21]. ವಿಷಯದ ಸಂಖ್ಯೆ: ತೆಆಸ್ಥಾಸ/82/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23-09-2016ರಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ ನಅಇ 279 ಎಸ್ಎಫ್ಸಿ 2015, ಬೆಂಗಳೂರು, ದಿನಾಂಕ 08-01-2016 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗೆ 2015-16 ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು 250.00 ಕೋಟಿಗಳ ಅನುದಾನ ಘೋಷಿಸಿದೆ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರೂ. 2000.00 ಲಕ್ಷಗಳ ಅನುದಾನ ಹಂಚಿಕೆ ಮಾಡಿರುತ್ತದೆ. ಸರ್ಕಾರದ ಅನುಮೋದನೆಯಂತೆ 2015-16 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ-3089 "ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ 7 ನಗರಸಭೆ ಮತ್ತು 1 ಪುರಸಭೆಗಳಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು" ಅಡಿ ಒಟ್ಟು ರೂ. 175.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಉಳಿಕೆ ರೂ. 75.00 ಕೋಟಿಗಳಲ್ಲಿ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರೂ. 20.00 ಕೋಟಿಗಳ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/2016 ಬೆಂಗಳೂರು ದಿನಾಂಕ: 21-06-2016 ರ ಆದೇಶದಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ, ಕೆರೆಗಳು ಮೊತ್ತ ರೂ. 7300-00 ಕೋಟಿಗಳ ಕ್ರಿಯಾ ಯೋಜನೆ Annexure-1 to Annexure-18 ರ ವರೆಗೆ ಅನುಮೋದನೆ ನೀಡಿದ್ದು, Annexure-11 ರಲ್ಲಿ ಸರ್ಕಾರದ ಆದೇಶ ಸಂಖ್ಯೆ ನಅಇ 279 ಎಸ್ಎಫ್ಸಿ 2015, ಬೆಂಗಳೂರು, ದಿನಾಂಕ 08-01-2016 ರ ಆದೇಶದಂತೆ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 250.00 ಕೋಟಿಗಳ ಅನುದಾನ ಒದಗಿಸಿದೆ. 2016-17 ನೇ ಸಾಲಿನ ಬಿ.ಬಿ.ಎಂ.ಪಿ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3089 "ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ 7 ನಗರಸಭೆ ಮತ್ತು 1 ಪುರಸಭೆಗಳಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು" ರಡಿ ಚಾಲ್ತಿ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದಿಂದ ಅನುದಾನ ಒದಗಿಸಿರುವುದರಿಂದ ಲೆಕ್ಕಶೀರ್ಷಿಕೆ ಪಿ-3089 ಅಡಿ ರೂ. 2000.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಲು ಹಾಗೂ ಸದರಿ ಕ್ರಿಯಾ ಯೋಜನೆ ಸರ್ಕಾರದಿಂದ ಅನುಮೋದನೆಯಾದ ನಂತರ ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## *22]. ವಿಷಯದ ಸಂಖ್ಯೆ: ತೆಆಸ್ಥಾಸ/83/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-10-2016ರಲ್ಲಿ ಪ್ರಸ್ತಾಪಿಸಿರುವಂತೆ, 2015-16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ ನಅಇ 524 ಎಸ್.ಎಫ್.ಸಿ 2015 / ದಿನಾಂಕ 05-01-2016 ರಲ್ಲಿ ರೂ. 17033.00 ಲಕ್ಷಗಳ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ. ಅದರಲ್ಲಿ ಸಾಮೂಹಿಕ / ಸಾರ್ವಜನಿಕ ಶೌಚಾಲಯ ಮತ್ತು ಸಪ್ಟೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ. 1098.05 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ವಲಯವಾರು ಅನುದಾನ ನಿಗದಿ ಮಾಡಿರುತ್ತದೆ. ರೂ. 1098.05 ಲಕ್ಷಗಳ ಪೈಕಿ 2015-16 ನೇ ಸಾಲಿನಲ್ಲಿ ಕ್ರಿಯಾಯೋಜನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುವ ರೂ. 288.38 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಕ್ರಿಯಾ ಯೋಜನೆ ಸಲ್ಲಿಸದೇ ಇದ್ದುದರಿಂದ ಉಳಿದ ವಲಯಗಳ ಮೊತ್ತ ರೂ. 809.67 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಿರುವುದಿಲ್ಲ. ದಕ್ಷಿಣ ವಲಯದ ಸಾರ್ವಜನಿಕ ಶೌಚಾಲಯ ಮತ್ತು ಸಪ್ಟೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ. 244.01 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಮುಖ್ಯ

ಅಭಿಯಂತರರು (ದಕ್ಷಿಣ) ರವರು 2015–16ನೇ ಸಾಲಿನ ರೂ 115.91 ಲಕ್ಷಗಳ ಕ್ರಿಯಾ ಯೋಜನೆಗೆ 14ನೇ ಹಣಕಾಸು ಆಯೋಗದ ಅನುದಾನದಡಿ ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮುಖ್ಯ ಲೆಕ್ಕಾಧಿಕಾರಿಗಳು 2015–16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಮಂಜೂರಾಗಿದ್ದ ರೂ. 170.33 ಕೋಟಿಗಳು ಪಾಲಿಕೆಗೆ ಬಿಡುಗಡೆಯಾಗಿರುವುದಾಗಿ ವರದಿಸಿರುತ್ತಾರೆ. ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ದಕ್ಷಿಣ ವಲಯದ ಶೌಚಾಲಯದ ಪ್ರಸ್ತಾವನೆ ಮೊತ್ತ ರೂ. 115.91 ಲಕ್ಷಗಳ ಅನುದಾನವನ್ನು ಮಾನ್ಯ ಆಯುಕ್ತರ ಆದೇಶದಂತೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಘಟನೋತ್ತರ ಅನುಮೋದನೆ ನೀರಿಕ್ಷಿಸಿ 2016–17ರ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕಶೀರ್ಷಿಕೆ ಪಿ–3110 ಅಡಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲಾಗಿದ್ದು, ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26.10.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***23]. ವಿಷಯದ ಸಂಖ್ಯೆ: ತೆಆಸ್ಥಾಸ/84/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 15–09–2016ರಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಶಾಸಕರು ಜಯನಗರ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ "ವಾರ್ಡ್ ನಂ 168 ರಲ್ಲಿರುವ ಪಟ್ಟಾಭಿರಾಮನಗರ ಕ್ಷೇಮಾಭಿವೃದ್ಧಿ ಸಂಘದ ಉದ್ಯಾವನದ ಅಭೀವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ. 12.00 ಲಕ್ಷಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್‌ಎಲ್‌ಎಡಿಎಸ್(ಬಿ.ಎನ್.ವಿ) ಸಿ.ಆರ್ 11/2015–16 ದಿನಾಂಕ 11–03–2016 ರಲ್ಲಿ 19 ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ಅಡಿ ಪರಿಗಣಿಸಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರು ಅನುದಾನದ ಮೊತ್ತದ ಶೇ 50 ರಷ್ಟು ಮೊತ್ತ ರೂ. 6.00 ಲಕ್ಷಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರು ಚೆಕ್ ಸಂಖ್ಯೆ 474240/ ದಿನಾಂಕ 28–5–2016 ರಲ್ಲಿ ಅನುದಾನವನ್ನು ಬಿಡುಗಡೆಗೊಳಿಸಿರುತ್ತಾರೆ ಎಂದು ದಾಖಲಿಸಿರುತ್ತಾರೆ. 2016–17 ನೇ ಸಾಲಿನ ಆಯವ್ಯಯದಲ್ಲಿ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ರ ಚಾಲ್ತಿ ಕಾಮಗಾರಿಗಳು ಅಡಿ ರೂ. 2.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿದೆ. ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಡಿ ಬಿಡುಗಡೆಯಾಗಿರುವ ಮೊತ್ತ ರೂ. 12.00 ಲಕ್ಷಗಳಿದ್ದು, ಲೆಕ್ಕಶೀರ್ಷಿಕೆ ಪಿ–0583 ಅಡಿ ರೂ. 2.00 ಲಕ್ಷಗಳನ್ನು ಮೀಸಲಿರಿಸಿರುವುದರಿಂದ ಜಾಬ್‌ಸಂಖ್ಯೆ ನೀಡಲು ಅನುದಾನದ ಕೊರತೆ ಇರುತ್ತದೆ. ಲೆಕ್ಕಶೀರ್ಷಿಕೆ ಪಿ–0583 ಅಡಿ ರೂ. 12.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದೆ. 2016–17ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0583 ಅಡಿ ರೂ. 12.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 15.09.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *24]. ವಿಷಯದ ಸಂಖ್ಯೆ: ತೆಆಸ್ಥಾಸ/85/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26–10–2016ರಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 141, ಸ್ವತ್ತಿನ ಸಂಖ್ಯೆ 90/1–15, ವಿಠಲನಗರ, ಅಜಾದ್‌ನಗರ, ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 6.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ಪಶ್ಚಿಮ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| **ಲೆಕ್ಕಶೀರ್ಷಿಕೆ: P- 0055 “Encroachment clearance Expenses ( Demolition charges)” Budget Book Page No. 111** (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **149.25** | **0.00** | **0.75** | **6.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 6.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 6.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26.10.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *25]. ವಿಷಯದ ಸಂಖ್ಯೆ: ತೆಆಸ್ಥಾಸ/86/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26–10–2016ರಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 7ರ ಕೊಡಿಗೆ ಹಳ್ಳಿ, ಸ್ವತ್ತಿನ ಸಂಖ್ಯೆ 77:1:77:1:94:6:04, ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 1,37,300–00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ಯಲಹಂಕ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದ್ದು, ಅದರಂತೆ ಕ್ರಮವಹಿಸಲು ಮಾನ್ಯ ಆಯುಕ್ತರು ಸೂಚಿಸಿರುತ್ತಾರೆ. ಸದರಿ ವೆಚ್ಚವನ್ನು 2016–17 ನೇ

ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **149.25** | **0.00** | **0.75** | **1.373** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 1.373 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 1.373 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26.10.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***26]. ವಿಷಯದ ಸಂಖ್ಯೆ: ತೆಆಸ್ಥಾಸ/87/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13-10-2016ರಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 65, ಮಾರುತಿ ಬಡಾವಣೆ, 7ನೇ ಅಡ್ಡ ರಸ್ತೆ ಸ್ವತ್ತಿನ ಸಂಖ್ಯೆ 13ರಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 5.10 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಮಲ್ಲೇಶ್ವರಂ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **149.25** | **0.00** | 0.75 | **5.10** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 5.10 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ

ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 5.10 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.10.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *27]. ವಿಷಯದ ಸಂಖ್ಯೆ: ತೆಆಸ್ಥಾಸ/88/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17–10–2016ರಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 124, ಕಟ್ಟಡ ಸಂಖ್ಯೆ 11/1, 7 ನೇ ಎ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 1.26 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ದಕ್ಷಿಣ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವ ಷರತ್ತಿಗೆ ಒಳಪಡಿಸಿ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ. ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: **P- 0055 "Encroachment clearance Expenses ( Demolition charges)" Budget Book Page No.** 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **149.25** | **0.00** | **0.75** | **1.26** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 1.26 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 1.26 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17.10.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***ಹೆಚ್ಚುವರಿ ವಿಷಯ:-***

### ***28]. ವಿಷಯದ ಸಂಖ್ಯೆ: ತೆಆಸ್ಥಾಸ/89/2016-17***

ಆಯುಕ್ತರ ದಿನಾಂಕ: 21-11-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ಪೌರ ನಿಗಮಗಳ ಕಾಯ್ದೆ ಕಲಂ 108 (ಎ) (16) ರ ಅನುಸಾರ ಪ್ರದೇಶವಾರು ಯೂನಿಟ್ ದರದ ಆಧಾರದ ಮೇಲೆ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ದಿನಾಂಕಃ 1-4-2008 ರಿಂದ ಜಾರಿಗೆ ತರಲಾಗಿರುವುದು ಸರಿಯಷ್ಟೆ.

ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಠ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30 ರಷ್ಟು ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ 2016-17 ನೇ ಸಾಲಿನಲ್ಲಿ ವಲಯ ವರ್ಗೀಕರಣ ಹಾಗೂ ವಸತಿ ಸ್ವತ್ತುಗಳಿಗೆ ಶೇ.20 ಹಾಗೂ ವಸತಿಯೇತರ ಸ್ವತ್ತುಗಳಿಗೆ ಶೇ.25 ರಷ್ಟು ಪ್ರದೇಶವಾರು ಯೂನಿಟ್ ದರ ಪರಿಷ್ಕರಿಸಿ ದಿನಾಂಕ: 01-04-2016 ರಿಂದ ಜಾರಿಗೆ ತರಲಾಗಿರುತ್ತದೆ.

ಸದರಿ ಪರಿಷ್ಕರಣೆಯಂತೆ ತೆರಿಗೆದಾರರು ಲೆಕ್ಕಚಾರ ಮಾಡಿ ಆಸ್ತಿ ತೆರಿಗೆ ಘೋಷಿಸಿಕೊಂಡು ಪಾವತಿಸಿರುತ್ತಾರೆ. ಈ ಮಧ್ಯೆ ಹಲವಾರು ಪ್ರಕರಣಗಳಲ್ಲಿ ಹಿಂದಿನ ಸಾಲಿಗೆ ಹೋಲಿಸಿದ್ದಲ್ಲಿ ಪ್ರಸ್ತುತ ಸಾಲಿನಲ್ಲಿ ಪಾವತಿಸಿರುವ ಆಸ್ತಿತೆರಿಗೆ ಮೊತ್ತವು ಹಿಂದಿನ ಸಾಲಿನ ಆಸ್ತಿತೆರಿಗೆ ಮೊತ್ತಕ್ಕಿಂತ ಶೇ.30 ಕ್ಕಿಂತ ಮೇಲ್ಪಟ್ಟು ಹೆಚ್ಚುವರಿ ಆಗಿ ಆಸ್ತಿತೆರಿಗೆ ಪಾವತಿಸಿರುವುದು ಕಂಡುಬಂದಿದೆ.

ದಿನಾಂಕ: 29-04-2016 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿರುತ್ತದೆ.

"2016-17 ನೇ ಸಾಲಿನಲ್ಲಿ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣದಂತೆ ಆಸ್ತಿತೆರಿಗೆಯನ್ನು ಲೆಕ್ಕಚಾರ ಮಾಡಿ, ನಂತರ ಲೆಕ್ಕಚಾರ ಮಾಡುವಾಗ ಈ ಹಿಂದಿನ ಸಾಲುಗಳಲ್ಲಿ ಪಾವತಿಸಲಾಗಿರುವ ಆಸ್ತಿತೆರಿಗೆಯ ಮೊತ್ತಕ್ಕಿಂತ ಹೆಚ್ಚುವರಿ ಮೊತ್ತವು ಲೆಕ್ಕಾಚಾರವಾಗಿದಲ್ಲಿ, ಹೆಚ್ಚುವರಿಯಾದ ಮೊತ್ತಕ್ಕೆ ವಸತಿಗೆ ಶೇ.20 ಮತ್ತು ಇತರೆ ಉಪಕರಗಳು ಹಾಗೂ ವಸತಿಯೇತರಕ್ಕೆ ಶೇ.25 ರಷ್ಟು ತೆರಿಗೆ ಮತ್ತು ಇತರೆ ಉಪಕರಗಳನ್ನು ಸೇರಿಸಿ ಆಸ್ತಿತೆರಿಗೆಯನ್ನು ಮಿತಿಗೊಳಿಸಿ ಆಸ್ತಿತೆರಿಗೆ ಸ್ವೀಕರಿಸತಕ್ಕದ್ದು."

ಸದರಿ ನಿರ್ಣಯದಂತೆ ತಂತ್ರಾಂಶವನ್ನು ಸಿದ್ದಪಡಿಸಿ ದಿನಾಂಕ: 04-05-2016 ರಿಂದ ಆಸ್ತಿತೆರಿಗೆ ಸ್ವೀಕರಿಸಲಾಗಿರುತ್ತದೆ. ನಂತರ, ಸ್ವತ್ತಿನ ಉಪಯೋಗದಲ್ಲಿ ಬದಲಾವಣೆ, ವಲಯ ವರ್ಗೀಕರಣ ಮತ್ತು ಸ್ವತ್ತಿನ ವಿಸ್ತೀರ್ಣದಲ್ಲಿ ಬದಲಾವಣೆ ಇರುವ ಪ್ರಕರಣಗಳಲ್ಲಿ ಆಸ್ತಿತೆರಿಗೆ ಲೆಕ್ಕಾಚಾರ ಮಾಡುವಾಗ ಹಿಂದಿನ ಸಾಲುಗಳಲ್ಲಿ ಪಾವತಿಸಲಾಗಿರುವ ಆಸ್ತಿತೆರಿಗೆಯ ಶೇ.20 (ವಸತಿ) ಮತ್ತು ಶೇ.25 ರಷ್ಟು (ವಸತಿಯೇತರ) ಮಿತಿಗೊಳಿಸಿ ತೆರಿಗೆ ಲೆಕ್ಕಚಾರವಾಗುತ್ತಿತ್ತು, ಸದರಿ ಲೆಕ್ಕಾಚಾರದಂತೆ ಹಲವಾರು ತೆರಿಗೆದಾರರು ಆಸ್ತಿತೆರಿಗೆಯನ್ನು ಪಾವತಿಸಿರುವುದು ಕಂಡುಬಂದಿದೆ. ಇಂತಹ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಮಾರ್ಗಸೂಚಿ ಬಗ್ಗೆ ದಿನಾಂಕ: 31-05-2016 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುತ್ತದೆ.

> "ಹೊಸದಾಗಿ ಕಟ್ಟಡ ನಿರ್ಮಾಣವಾಗಿರುವ ಪ್ರಕರಣಗಳಲ್ಲಿ ಹಾಗೂ ಸ್ವತ್ತಿನ ಉಪಯೋಗದಲ್ಲಿ ಬದಲಾವಣೆ ಆಗಿರುವ ಪ್ರಕರಣಗಳಲ್ಲಿ ಈ ಹಿಂದಿನ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣದಂತೆ (2008-16) ಮತ್ತು ಪ್ರಸ್ತುತ ಸಾಲಿನ ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣದಂತೆ (2016) ತಂತ್ರಾಂಶದಲ್ಲಿ ಲೆಕ್ಕಾಚಾರ ಮಾಡಿರುವ ಆಸ್ತಿತೆರಿಗೆ

ಮೊತ್ತವನ್ನು ತಾಳೆ ಮಾಡಿ ವಸತಿಗೆ ಶೇ. 20 ರಷ್ಟು ಹಾಗೂ ವಸತಿಯೇತರ ಸ್ವತ್ತಗಳಿಗೆ ಶೇ.25 ರಷ್ಟು ಹಾಗೂ ಇತರೆ ಉಪಕರಗಳನ್ನು ಸೇರಿಸಿ ಆಸ್ತಿತೆರಿಗೆ ಮಿತಿಗೊಳಿಸಿ ಸ್ವೀಕರಿಸುವುದು".

ಸದರಿ ನಿರ್ಣಯದಂತೆ ತಂತ್ರಾಂಶದಲ್ಲಿ ಮಾರ್ಪಾಡುಗಳನ್ನು ಮಾಡಿ ದಿನಾಂಕ: 16-06-2016 ರಿಂದ ಆಸ್ತಿತೆರಿಗೆ ಸಂಗ್ರಹಿಸಲಾಗುತ್ತಿದೆ.

ಈ ರೀತಿ 2016-17 ನೇ ಸಾಲಿನ ಆಸ್ತಿತೆರಿಗೆ ಲೆಕ್ಕಾಚಾರಲ್ಲಿ ಪದೇ ಪದೇ ಮಾರ್ಪಾಡುಗಳನ್ನು ಮಾಡಿರುವುದರಿಂದ ಈ ಕೆಳಕಂಡ ದೋಪಲೋಷಗಳು ಕಂಡುಬರುತ್ತಿದೆ.

1. **ಆಸ್ತಿತೆರಿಗೆ ಸಂಗ್ರಹಣೆ : –**

- ಸ್ವಯಂ ಘೋಷಣೆ ಆಸ್ತಿತೆರಿಗೆ ಪದ್ಧತಿ ಅಡಿಯಲ್ಲಿ 2016-17 ನೇ ಸಾಲಿನಿಂದ ಜಾರಿಗೆ ಬರುವಂತೆ, ಪ್ರದೇಶವಾರು ಯೂನಿಟ್ ದರ ಹಾಗೂ ವಲಯ ವರ್ಗೀಕರಣವನ್ನು ಪರಿಷ್ಕರಿಸಿ, ದಿನಾಂಕ: 16.03.2016 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.
- ಈ ಸಂಬಂಧ ಹೊಸದಾಗಿ ತಂತ್ರಾಂಶವನ್ನು ಸಿದ್ದಪಡಿಸಿ, ದಿನಾಂಕ: 04-04-2016 ರಿಂದ 2016-17 ನೇ ಸಾಲಿನ ಆಸ್ತಿತೆರಿಗೆ ಸಂಗ್ರಹಿಸಲು ಪ್ರಾರಂಭಿಸಲಾಗಿರುತ್ತದೆ. ಹಲವಾರು ತೆರಿಗೆದಾರರರು ದಿನಾಂಕ: 16-03-2016 ರ ಅಧಿಸೂಚನೆಯಂತೆ, ದಿನಾಂಕ: 04-04-2016 ರಿಂದ 15-06-2016 ರವರೆಗೆ ಆಸ್ತಿತೆರಿಗೆಯನ್ನು ಪಾವತಿಸಿರುತ್ತಾರೆ.
- ಆಸ್ತಿತೆರಿಗೆ ಪರಿಷ್ಕರಣೆ ಸಂಬಂಧ ಹಲವಾರು ತೆರಿಗೆದಾರರರು ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ದಿನಾಂಕ: 29-04-2016 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ: 07 /2016-17 ರಲ್ಲಿ ದಿನಾಂಕ: 16-03-2016 ರ ಅಧಿಸೂಚನೆಯಂತೆ ಆಸ್ತಿತೆರಿಗೆ ಲೆಕ್ಕಾಚಾರ ಮಾಡಿ, ಸದರಿ ಮೊತ್ತವು ಈ ಹಿಂದಿನ ಸಾಲುಗಳಲ್ಲಿ ಪಾವತಿಸಲಾದ ಆಸ್ತಿತೆರಿಗೆ ಮೊತ್ತಕ್ಕಿಂತ ವಸತಿಗೆ ಶೇ.20 ಮತ್ತು ವಸತಿಯೇತರಕ್ಕೆ ಶೇ.25 ಕ್ಕಿಂತ ಹೆಚ್ಚಾದಲ್ಲಿ ಶೇ.20 ಹಾಗೂ ಶೇ.25 ಕ್ಕೆ ಮಿತಿಗೊಳಿಸಿ ಪಾವತಿಸುವಂತೆ ತೀರ್ಮಾನಿಸಲಾಯಿತು. ಈ ಸಂಬಂಧ 16-06-2016 ರಂದು ತಂತ್ರಾಂಶವನ್ನು ಸಿದ್ದಪಡಿಸಿ ಜಾರಿಗೊಳಿಸಲಾಯಿತು.
- ಈ ಹಿಂದೆ ಇದ್ದಂತಹ ತಂತ್ರಾಂಶದಂತೆ, ದಿನಾಂಕ: 04-04-2016 ರಿಂದ 15-06-216 ರವರೆಗೆ ಆಸ್ತಿತೆರಿಗೆ ಪಾವತಿಸಿರುವ ಹಲವಾರು ತೆರಿಗೆದಾರರು ಪಾವತಿಸಬೇಕಾಗಿದ್ದ ಆಸ್ತಿತೆರಿಗೆ ಮೊತ್ತಕ್ಕಿಂತ ಹೆಚ್ಚುವರಿ ಪಾವತಿಸಿರುವುದು ಕಂಡುಬಂದಿರುತ್ತದೆ. ಮುಂದುವರೆದಂತೆ, ದಿನಾಂಕ: 29-04-2016 ರ ನಗರ ಪಾಲಿಕೆಯ ನಿರ್ಣಯದಲ್ಲಿ ಹೆಚ್ಚುವರಿ ಪಾವತಿಸಲಾಗಿರುವ ಮೊತ್ತವನ್ನು ಮುಂಬರುವ ಸಾಲುಗಳಿಗೆ ಹೊಂದಾಣಿಕೆ ಮಾಡಲಾಗುವುದೆಂದು ತೀರ್ಮಾನಿಸಲಾಗಿರುತ್ತದೆ.
- ಒಂದು ವೇಳೆ ಸದರಿ ಅವಧಿಯಲ್ಲಿ ಮೊದಲನೇ ಕಂತಿನ ಆಸ್ತಿತೆರಿಗೆಯನ್ನು ಮಾತ್ರ ಪಾವತಿಸಿದ್ದಲ್ಲಿ ಹೆಚ್ಚುವರಿ ಮೊತ್ತವನ್ನು 2ನೇ ಕಂತಿನ ಆಸ್ತಿತೆರಿಗೆ ಮೊತ್ತಕ್ಕೆ ಹಾಗೂ ಪೂರ್ಣ ವರ್ಷದ ಆಸ್ತಿತೆರಿಗೆ ಪಾವತಿಸಿದ್ದಲ್ಲಿ ಹೆಚ್ಚುವರಿ ಮೊತ್ತವನ್ನು 2017-18 ನೇ ಸಾಲಿನ ಆಸ್ತಿತೆರಿಗೆ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.
- ದಿನಾಂಕ: 16-06-2016 ರಿಂದ Dual Claculator ರನ್ನು ಜಾರಿಗೊಳಿಸಿದ್ದು, ಈ ಅವಧಿಯಲ್ಲಿ ಹೆಚ್ಚುವರಿ ಆಸ್ತಿತೆರಿಗೆ ಪಾವತಿಸಲಾಗಿರುವ ಪ್ರಕರಣಗಳನ್ನು ಗುರುತಿಸತಕ್ಕದ್ದು.

- ಎನ್.ಐ.ಸಿ ಸಂಸ್ಥೆಯವರು ಹೆಚ್ಚುವರಿ ಆಗಿ ಆಸ್ತಿತೆರಿಗೆ ಪಾವತಿಸಲಾಗಿರುವ ಪ್ರಕರಣಗಳಿಗೆ ಸಂಬಂದಿಸಿದಂತೆ, ಆಸ್ತಿತೆರಿಗೆ ರಶೀದಿಯಲ್ಲಿ ತಿದ್ದುಪಡಿ ಮಾಡಿ "ಹೊಂದಾಣಿಕೆ ಮಾಡಿಕೊಳ್ಳಬೇಕಾದ ಮೊತ್ತ"ವನ್ನು ನಮೂದಿಸಿ, ಮುಂಬರುವ ಸಾಲುಗಳಿಗೆ ಸರಿದೂಗಿಸುವಲ್ಲಿ ಪ್ರತ್ಯೇಕವಾಗಿ ತಂತ್ರಾಂಶವನ್ನು ಸಿದ್ದಪಡಿಸತಕ್ಕದ್ದು.

**2. ಪರಿಷ್ಕೃತ ಆಸ್ತಿತೆರಿಗೆ ಘೋಷಣೆಗಳನ್ನು ಸಲ್ಲಿಸುವ ಬಗ್ಗೆ.**

- ಸ್ವತ್ತಿನ ಉಪಯೋಗ, ವಲಯ ವರ್ಗೀಕರಣ ಮತ್ತು ಸ್ವತ್ತಿನ ವಿಸ್ತೀರ್ಣದಲ್ಲಿ ಬದಲಾವಣೆ ಇರುವ ಪ್ರಕರಣಗಳಲ್ಲಿ ದಿನಾಂಕ: 29–04–2016 ರ ನಗರ ಪಾಲಿಕೆಯ ನಿರ್ಣಯದಂತೆ ದಿನಾಂಕ: 16.03.2016 ರ ಅಧಿಸೂಚನೆಯಂತೆ ಆಸ್ತಿತೆರಿಗೆ ಲೆಕ್ಕಾಚಾರ ಮಾಡಿ, ಹಿಂದಿನ ಸಾಲುಗಳಲ್ಲಿ ಪಾವತಿಸಲಾದ ಆಸ್ತಿತೆರಿಗೆ ಮೊತ್ತಕ್ಕೆ ವಸತಿಗೆ ಶೇ.20 ಮತ್ತು ವಸತಿಯೇತರಕ್ಕೆ ಶೇ.25 ರಷ್ಟು ಮಿತಿಗೊಳಿಸಿ ಪಾವತಿಸಿರುವ ಪ್ರಕರಣಗಳಲ್ಲಿ ಪಾವತಿಸಬೇಕಾಗಿರುವ ಆಸ್ತಿತೆರಿಗೆ ಮೊತ್ತಕ್ಕಿಂತ ಕಡಿಮೆ ಆಸ್ತಿತೆರಿಗೆ ಪಾವತಿಸಿರುವುದು ದಿನಾಂಕ: 16–06–2016 ರಿಂದ ಜಾರಿಗೆ ತರಲಾದ Dual Claculator ರಿಂದ ಕಂಡುಬಂದಿರುತ್ತದೆ.

- ಕೆ.ಎಂ.ಸಿ ಕಾಯ್ದೆ ನಿಯಮ 108(ಎ) ಹಾಗೂ ಅದರಡಿಯಲ್ಲಿ ರಚಿಸಲಾಗಿರುವ ನಿಯಮಾವಳಿ (8)(2) ರಲ್ಲಿ ತೆರಿಗೆದಾರರು ತಪ್ಪಾಗಿ ಘೋಷಿಸಿಕೊಂಡಿರುವ ಪ್ರಕರಣಗಳಲ್ಲಿ ಪರಿಷ್ಕೃತ ಘೋಷಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ರೀತಿ ತಪ್ಪಾಗಿ ಘೋಷಿಸಿಕೊಂಡಿರುವ ಪ್ರಕರಣಗಳಲ್ಲಿ ತೆರಿಗೆದಾರರೇ ಸ್ವಯಂ ಪ್ರೇರಿತರಾಗಿ ಪರಿಷ್ಕೃತ ಘೋಷಣೆಯನ್ನು ಸಲ್ಲಿಸಲು ಬಂದಲ್ಲಿ ಪ್ರತಿಯೊಬ್ಬ ತೆರಿಗೆದಾರರಿಗೆ ಪರಿಷ್ಕೃತ ಘೊಷಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ. ಹಾಗೂ ವಿಳಂಬ ಪಾವತಿಗೆ ಶೇ.2 ರಷ್ಟು ಬಡ್ಡಿಯನ್ನು ಸ್ವೀಕರಿಸಲು ಕಾಯ್ದೆಯಲ್ಲಿ ಅವಕಾಶ ಇರುತ್ತದೆ.
- ಆಸ್ತಿತೆರಿಗೆ ಪಾವತಿಯಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ತೆರಿಗೆದಾರರು 30 ದಿನಗಳ ಒಳಗಾಗಿ ಪರಿಷ್ಕೃತ ಘೋಷಣೆಗಳನ್ನು ಸಲ್ಲಿಸುವಂತೆ, ಕಂದಾಯ ಇಲಾಖೆಯ ಸಿಬ್ಬಂದಿಯು ಪ್ರತಿಯೊಬ್ಬ ತೆರಿಗೆದಾರರಿಗೆ ಮನವರಿಕೆ ಮಾಡಿಕೊಡತಕ್ಕದ್ದು. ಒಂದು ವೇಳೆ ಸದರಿ ಅವಧಿ ಒಳಗಾಗಿ ಪರಿಷ್ಕೃತ ಘೋಷಣೆಗಳನ್ನು ಸಲ್ಲಿಸದೇ ಇದ್ದಲ್ಲಿ ಕೆ.ಎಂ.ಸಿ ಕಾಯ್ದೆ ಅನ್ವಯ ಕ್ರಮ ಜರುಗಿಸತಕ್ಕದ್ದು.
- ದಿನಾಂಕ: 04–05–2016 ರಿಂದ 16–06–2016 ರವರೆಗೆ ಸ್ವತ್ತಿನ ಉಪಯೋಗದಲ್ಲಿ ಬದಲಾವಣೆ, ವಲಯ ವರ್ಗೀಕರಣ ಮತ್ತು ಸ್ವತ್ತಿನ ವಿಸ್ತೀರ್ಣದಲ್ಲಿ ಬದಲಾವಣೆ ಇರುವ ಪ್ರಕರಣಗಳಲ್ಲಿ ಆಸ್ತಿತೆರಿಗೆ ಪಾವತಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುವುದಿಲ್ಲ. ಈ ವೇಳೆಯಲ್ಲಿ ಹಲವಾರು ತೆರಿಗೆದಾರರು ಆಸ್ತಿತೆರಿಗೆ ಪಾವತಿಸಿರುವುದು ಕಂಡುಬಂದಿದೆ. ಆದುದರಿಂದ ಸದರಿ ಅವಧಿಯಲ್ಲಿ ಆಸ್ತಿತೆರಿಗೆ ಪಾವತಿಸಿರುವ ತೆರಿಗೆದಾರರು ಪರಿಷ್ಕೃತ ಘೋಷಣೆಗಳನ್ನು ಸಲ್ಲಿಸುವಾಗ ಈ ಹಿಂದೆ ಘೋಷಿಸಿಕೊಂಡಿರುವ ಸ್ವತ್ತಿನ ವಿವರಗಳಲ್ಲಿ ಯಾವುದೇ ವಿವರಗಳನ್ನು ಬದಲಾವಣೆ ಮಾಡದೇ ಯಥಾ ರೀತಿ ನಮೂದಿಸಿದ್ದಲ್ಲಿ ಯಾವುದೇ ಬಡ್ಡಿಯನ್ನು ವಿಧಿಸದೇ ವ್ಯತ್ಯಾಸದ ಮೊತ್ತವನ್ನು ಪಾವತಿಸಿಕೊಳ್ಳತಕ್ಕದ್ದು. ಒಂದು ವೇಳೆ ಈ ಹಿಂದೆ ಘೋಷಿಸಿಕೊಂಡಿರುವ ಸ್ವತ್ತಿನ ವಿವರಗಳಲ್ಲಿ ಯಾವುದೇ ವಿವರಗಳನ್ನು ಬದಲಾವಣೆ ಮಾಡಿದ್ದಲ್ಲಿ ವ್ಯತ್ಯಾಸದ ಮೊತ್ತಕ್ಕೆ ಮಾಹೆಯಾನ ಶೇ.2 ರಷ್ಟು ಬಡ್ಡಿಯೊಂದಿಗೆ ಆಸ್ತಿತೆರಿಗೆ ಪಾವತಿಸಿಕೊಳ್ಳಬಹುದಾಗಿರುತ್ತದೆ.

3. **<u>2016–17ನೇ ಸಾಲಿನ ಆಸ್ತಿತೆರಿಗೆ ಪಾವತಿಗೆ ನಿರ್ಭಂದಗೊಳಿಸಿರುವ ಪ್ರಕರಣಗಳನ್ನು ತೆರವುಗೊಳಿಸುವ ಬಗ್ಗೆ.</u>**

- ದಿನಾಂಕ: 04–04–2016 ರಿಂದ 15–06–2016 ರವರೆಗೆ ಮೊದಲನೇ ಕಂತಿನ ಆಸ್ತಿತೆರಿಗೆ ಪಾವತಿಸಿರುವ ಸುಮಾರು 796 ಪ್ರಕರಣಗಳನ್ನು 2ನೇ ಕಂತಿನ ಆಸ್ತಿತೆರಿಗೆ ಪಾವತಿಸದಂತೆ ತಂತ್ರಾಂಶದಲ್ಲಿ ನಿರ್ಭಂದಗೊಳಿಸಲಾಗಿರುತ್ತದೆ. ಇಂತಹ ಪ್ರಕರಣಗಳ ತೆರಿಗೆದಾರರಿಗೆ ಮಾಹಿತಿ ನೀಡಿ Dual Claculator ಅಡಿಯಲ್ಲಿ ಆಸ್ತಿತೆರಿಗೆ ಲೆಕ್ಕಾಚಾರ ಮಾಡಿ, ಪರಿಷ್ಕೃತ ಘೋಷಣೆ ಸಲ್ಲಿಸಲು ಮನವರಿಕೆ ಮಾಡತಕ್ಕದ್ದು. ಪರಿಷ್ಕೃತ ಘೋಷಣೆಗಳನ್ನು ಸಲ್ಲಿಸಿದ ನಂತರ 2ನೇ ಕಂತಿನ ಆಸ್ತಿತೆರಿಗೆ ಪಾವತಿಸಲು ಅವಕಾಶ ಕಲ್ಪಿಸಲಾಗುವುದು.
- ಪರಿಷ್ಕೃತ ಘೋಷಣೆಯಲ್ಲಿ ಪಾವತಿಸಬೇಕಾಗಿರುವ ಮೊತ್ತಕ್ಕಿಂತ ಹೆಚ್ಚುವರಿ ಮೊತ್ತ ಪಾವತಿ ಆಗಿರುವುದು ಕಂಡುಬಂದಲ್ಲಿ ಸದರಿ ಹೆಚ್ಚುವರಿ ಮೊತ್ತವನ್ನು ಪರಿಷ್ಕೃತ ಘೋಷಣೆಯ ರಶೀದಿಯಲ್ಲಿ ನಮೂದಿಸತಕ್ಕದ್ದು.
- ಪರಿಷ್ಕೃತ ಲೆಕ್ಕಾಚಾರ ಮಾಡಿದಾಗ ಪಾವತಿಸಬೇಕಾಗಿರುವ ಆಸ್ತಿತೆರಿಗೆ ಮೊತ್ತಕ್ಕಿಂತ ಕಡಿಮೆ ಮೊತ್ತ ಪಾವತಿಸಿರುವುದು ಕಂಡುಬಂದಲ್ಲಿ ವ್ಯತ್ಯಾಸದ ಮೊತ್ತವನ್ನು 30 ದಿನಗಳ ಒಳಗಾಗಿ ಪಾವತಿಸತಕ್ಕದ್ದು. ಒಂದು ವೇಳೆ ಪಾವತಿಸದೇ ಇದ್ದಲ್ಲಿ ಕೆ.ಎಂ.ಸಿ ಕಾಯ್ದೆ ಅನ್ವಯ ಬಡ್ಡಿ ಮತ್ತು ದಂಡ ಸಮೇತ ಪಾವತಿಸಿಕೊಳ್ಳಲಾಗುವುದು.
- ಪರಿಷ್ಕೃತ ಘೋಷಣೆಯಲ್ಲಿ ಈ ಹಿಂದೆ ಘೋಷಿಸಿಕೊಂಡಿರುವ ಆಸ್ತಿತೆರಿಗೆ ಮೊತ್ತಕ್ಕಿಂತ ಕಡಿಮೆ ಲೆಕ್ಕಾಚಾರವಾದ ಪ್ರಕರಣಗಳಲ್ಲಿ ತೆರಿಗೆದಾರರು ಸಂಬಂಧಪಟ್ಟ ಉಪವಿಭಾಗ ಕಛೇರಿಯನ್ನು ಸಂಪರ್ಕಿಸತಕ್ಕದ್ದು. ತದನಂತರ, ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿ, ತೆರಿಗೆದಾರರು ಪರಿಷ್ಕೃತ ಘೋಷಣೆಯಲ್ಲಿ ಸಲ್ಲಿಸಿರುವ ವಿವರಗಳು ಸರಿಯಾಗಿದ್ದಲ್ಲಿ ಕಂದಾಯ ಅಧಿಕಾರಿಗಳಿಗೆ ನೀಡಲಾಗಿರುವ ಲಾಗಿನ್‌ಗಳಲ್ಲಿ ಪರಿಷ್ಕೃತ ಘೋಷಣೆಗಳನ್ನು ಸಲ್ಲಿಸತಕ್ಕದ್ದು.

4. **<u>ಆನ್‌ಲೈನ್ ಮೂಲಕ ಒಂದೇ ಸ್ವತ್ತಿಗೆ ಒಂದಕ್ಕಿಂತ ಹೆಚ್ಚು ಬಾರಿ ಆಸ್ತಿತೆರಿಗೆ ಪಾವತಿಸಿರುವ ಪ್ರಕರಣಗಳು :–</u>**

- ಆನ್‌ಲೈನ್ ಮೂಲಕ ಆಸ್ತಿತೆರಿಗೆ ಪಾವತಿಸುವ ಸಂಧರ್ಭದಲ್ಲಿ ತಾಂತ್ರಿಕ, ಅಂತರ್ಜಾಲದ ತೊಂದರೆ ಹಾಗೂ ಇನ್ನಿತರೆ ಕಾರಣಾಂತರಗಳಿಂದ ಹೆಚ್ಚುವರಿ ಆಸ್ತಿತೆರಿಗೆ ಪಾವತಿಸಲು ಪ್ರಯತ್ನಿಸಿ, ಒಂದೇ ಸ್ವತ್ತಿಗೆ ಒಂದಕ್ಕಿಂತ ಹೆಚ್ಚು ಬಾರಿ ಆಸ್ತಿತೆರಿಗೆ ಪಾವತಿಸಿರುತ್ತಾರೆ. ಸದರಿ ಹೆಚ್ಚುವರಿ ಮೊತ್ತವನ್ನು ಹಿಂಪಾವತಿಸುವಂತೆ (Refund) ತೆರಿಗೆದಾರರು ಕೋರಿರುತ್ತಾರೆ.
- ಕೆಲವೊಂದು ಪ್ರಕರಣಗಳಲ್ಲಿ ಖಾತೆದಾರರೇ ಹೆಚ್ಚುವರಿ ಬಾರಿ ಪಾವತಿಸಿರುವ ಮೊತ್ತವನ್ನು ಗೇಟ್‌ವೇಗಳಿಂದ Chargeback ಮುಖಾಂತರ ಹಿಂಪಡೆದಿರುತ್ತಾರೆ.
- ಈ ರೀತಿ ಗೇಟ್‌ವೇಗಳಿಂದ Chargeback ಮುಖಾಂತರ ಹೆಚ್ಚುವರಿ ಪಾವತಿಸಿರುವ ಮೊತ್ತವನ್ನು ಪಾವತಿದಾರರಿಗೆ ಹಿಂತಿರುಗಿಸುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ, ಹಾಗೂ Chargeback ಮುಖಾಂತರ ಹೆಚ್ಚುವರಿ ಪಾವತಿಸಿರುವ ಮೊತ್ತವನ್ನು ಹಿಂತಿರುಗಿಸುವಂತೆ ಕೋರಿರುರವ ಎಲ್ಲಾ ಪ್ರಕರಣಗಳ ವಿವರಗಳನ್ನು ಬಿಬಿಎಂಪಿಯ ಪರಿಶೀಲನೆಗಾಗಿ ಕಳುಹಿಸಿಕೊಡುವಂತೆ ಎಲ್ಲಾ ಗೇಟ್‌ವೇಗಳಿಗೆ ಪತ್ರ ಬರೆಯತಕ್ಕದ್ದು.

- ಒಂದಕ್ಕಿಂತ ಹೆಚ್ಚು ಬಾರಿ ಆಸ್ತಿತೆರಿಗೆ ಪಾವತಿಸಲಾಗಿರುವ ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆ ನಂತರವೇ ಪಾವತಿದಾರರ ಖಾತೆಗೆ ಹಿಂದಿರುಗಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಇಂತಹ ಪ್ರಕರಣಗಳನ್ನು ಎನ್.ಐ.ಸಿ ಸರ್ವರ್ ಮೂಲಕ ಪಾವತಿ ಗೇಟ್‌ವೇಗೆ ಸಂಯೋಜಿಸಲು ಸೂಚಿಸಲಾಗಿದೆ.
- Chargeback ಮುಖಾಂತರ ಹೆಚ್ಚುವರಿ ಪಾವತಿಸಿರುವ ಮೊತ್ತವನ್ನು ಹಿಂಪಡೆಯುವಾಗ ಕೆಲವು ಪ್ರಕರಣಗಳಲ್ಲಿ ರಶೀದಿ ಸಿದ್ದವಾಗಿರುವ ವಹಿವಾಟಿನ ಮೊತ್ತವನ್ನು ಹಿಂಪಡೆದಿರುವುದು ಕಂಡುಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಎನ್.ಐ.ಸಿ ಸಂಸ್ಥೆಯು ಕೂಡಲೇ ರಶೀದಿಗಳನ್ನು ರದ್ದುಪಡಿಸತಕ್ಕದ್ದು. ಈ ಸಂಬಂಧ ಬಿಬಿಎಂಪಿಯು ಗೇಟ್‌ವೇಗಳಿಂದ ಅಗತ್ಯ ಮಾಹಿತಿಗಳನ್ನು ಪಡೆದು, ಎನ್.ಐ.ಸಿ ಸಂಸ್ಥೆಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡತಕ್ಕದ್ದು.
- ಈ ರೀತಿ ರದ್ದುಪಡಿಸಲಾದ ರಶೀದಿಗಳ ತೆರಿಗೆದಾರರಿಗೆ ಮಾಹಿತಿ ನೀಡಿ ಮತ್ತೊಮ್ಮೆ ಹೊಸದಾಗಿ ಲೆಕ್ಕಾಚಾರ ಮಾಡಿ ಆಸ್ತಿತೆರಿಗೆ ಪಾವತಿಸುವಂತೆ ಮನವರಿಕೆ ಮಾಡತಕ್ಕದ್ದು.

5. **ಆಸ್ತಿತೆರಿಗೆ ಸ್ವೀಕರಿಸಲಾದ ಪ್ರಕರಣಗಳಲ್ಲಿ ತಂತ್ರಾಂಶದ ಮೂಲಕ ರಶೀದಿಗಳನ್ನು ಸಿದ್ದಪಡಿಸಲು ಸಾಧ್ಯವಾಗದೇ ಇರುವ ಬಗ್ಗೆ.**

- ಆಸ್ತಿತೆರಿಗೆ ಪಾವತಿಯ ಪ್ರತಿಯೊಂದು ಚಲನ್‌ಗಳಿಗೂ ವಾಯಿದೆ ಅವಧಿಯನ್ನು ನಿಗಧಿಪಡಿಸಲಾಗಿದ್ದು, ಸದರಿ ಅವಧಿಯೊಳಗಾಗಿ ಬಿಬಿಎಂಪಿ ಆಸ್ತಿತೆರಿಗೆ ತಂತ್ರಾಂಶದಲ್ಲಿ ಚಲನ್‌ಗಳ ವಿವರಗಳನ್ನು ಬ್ಯಾಂಕ್ ಅಧಿಕಾರಿಗಳು ನಮೂದಿಸಬೇಕಾಗಿರುತ್ತದೆ.
- ಕೆಲ ಸಂದರ್ಭದಲ್ಲಿ ಬ್ಯಾಂಕ್ ಅಧಿಕಾರಿಗಳು ವಾಯಿದೆ ಅವಧಿ ಒಳಗಾಗಿ ಬಿಬಿಎಂಪಿ ಆಸ್ತಿತೆರಿಗೆ ತಂತ್ರಾಂಶದಲ್ಲಿ ಚಲನ್‌ಗಳ ವಿವರಗಳನ್ನು ನಮೂದಿಸದೇ ಇರುವುದರಿಂದ ರಶೀದಿಗಳು ಸಿದ್ದಪಡಿಸಲು ಸಾಧ್ಯವಾಗಿರುವುದಿಲ್ಲ.
- ಬ್ಯಾಂಕ್ ಅಧಿಕಾರಿಗಳು ನಿಗಧಿತ ಅವಧಿಯೊಳಗಾಗಿ ಬಿಬಿಎಂಪಿ ಆಸ್ತಿತೆರಿಗೆ ತಂತ್ರಾಂಶದಲ್ಲಿ ಚಲನ್‌ಗಳ ವಿವರಗಳನ್ನು ನಮೂದಿಸದೇ ಇರುವ ಪ್ರಕರಣಗಳಲ್ಲಿ ಸದರಿ ಸ್ವತ್ತುಗಳ ಮಾಲೀಕರ ಹೆಸರುಗಳನ್ನು ಎನ್.ಐ.ಸಿ ಸಂಸ್ಥೆಯು ಗುರುತಿಸತಕ್ಕದ್ದು.
- ಹಲವಾರು ಪ್ರಕರಣಗಳಲ್ಲಿ ಆಸ್ತಿತೆರಿಗೆ ಪಾವತಿ ಸಂಬಂಧ ಚಲನ್‌ಗಳನ್ನು ಸಿದ್ದಪಡಿಸಿದ ನಂತರ, ಆಸ್ತಿತೆರಿಗೆ ಪಾವತಿಸಲು ಬ್ಯಾಂಕ್‌ಗಳಿಗೆ ಹೋಗದೇ ಇರುವುದು ತಿಳಿದುಬಂದಿರುತ್ತದೆ.
- ಈ ರೀತಿ ಸಿದ್ದಪಡಿಸಲಾಗಿರುವ ತೆರಿಗೆದಾರರ ವಿವರಗಳ ಆಧಾರದ ಮೇರೆಗೆ ಲೆಕ್ಕ ಪರಿಶೋಧನೆ ನಡೆಸಿ, ತೆರಿಗೆದಾರರು ಪಾವತಿಸಿರುವ ಮೊತ್ತವು ನಗರ ಪಾಲಿಕೆ ಖಾತೆಗೆ ಜಮಾ ಆಗಿದೆಯೇ ಎಂಬುದರ ಬಗ್ಗೆ ಬ್ಯಾಂಕ್ ಪಾಸ್ ಶೀಟ್‌ನೊಂದಿಗೆ ತಾಳೆ ಮಾಡಿ ನೈಜಿಕತೆ ಬಗ್ಗೆ ದೃಢೀಕರಿಸತಕ್ಕದ್ದು.
- ಸದರಿ ಕಾರ್ಯವು ಪೂರ್ಣಗೊಂಡ ನಂತರ, ಎನ್.ಐ.ಸಿ ಸಂಸ್ಥೆಯು ವಾಯಿದೆ ಅವಧಿ ಪೂರ್ಣಗೊಂಡ ಚಲನ್‌ಗಳ ವಿವರಗಳನ್ನು ಬಿಬಿಎಂಪಿ ಆಸ್ತಿತೆರಿಗೆ ತಂತ್ರಾಂಶದಲ್ಲಿ ನಮೂದಿಸಲು ಅವಕಾಶ ಕಲ್ಪಿಸತಕ್ಕದ್ದು. ಮುಂದುವರೆದಂತೆ, ನಗರ ಪಾಲಿಕೆ ಖಾತೆಗೆ ಜಮಾ ಆಗಿರುವ ಮೊತ್ತಕ್ಕೆ ರಶೀದಿಗಳನ್ನು ಸಿದ್ದಪಡಿಸಲು ಅವಕಾಶ ಕಲ್ಪಿಸತಕ್ಕದ್ದು.
- ಬ್ಯಾಂಕ್‌ಗಳಲ್ಲಿ ತೆರಿಗೆದಾರರು ಸಲ್ಲಿಸಿರುವ ಚಲನ್‌ಗಳ ವಿವರಗಳನ್ನು ನಿಗಧಿತ ಅವಧಿಯೊಳಗಾಗಿ ತಂತ್ರಾಂಶದಲ್ಲಿ ನಮೂದಿಸದೇ ಇರುವುದರಿಂದ ತೆರಿಗೆದಾರರು ಪಾವತಿಸಿರುವ ಮೊತ್ತಕ್ಕೆ ರಶೀದಿಗಳನ್ನು ಸಿದ್ದಪಡಿಸಲು ಸಾಧ್ಯವಾಗಿರುವುದಿಲ್ಲ. ಮುಂದುವರೆದಂತೆ, ತೆರಿಗೆದಾರರು

ರಶೀದಿಗಳನ್ನು ನೀಡುವಂತೆ, ಬ್ಯಾಂಕ್‌ಗಳಿಗೆ ಸಂಪರ್ಕಿಸಲಾಗಿ, ಬ್ಯಾಂಕ್ ಅಧಿಕಾರಿಗಳು ಮತ್ತೊಮ್ಮೆ ಚಲನ್‌ಗಳನ್ನು ಸಿದ್ದಪಡಿಸಿಕೊಂಡು ರಶೀದಿಗಳನ್ನು ನೀಡಿರುತ್ತಾರೆ. ಇಂತಹ ಕೆಲವು ಪ್ರಕರಣಗಳಲ್ಲಿ ತೆರಿಗೆದಾರರು ಪಾವತಿಸಿರುವ ಮೊತ್ತಕ್ಕೂ ರಶೀದಿಯಲ್ಲಿ ನಮೂದಾಗಿರುವ ಮೊತ್ತಕ್ಕೂ ವ್ಯತ್ಯಾಸವಿರುತ್ತದೆ. ಆದುದರಿಂದ ಎನ್.ಐ.ಸಿ ಸಂಸ್ಥೆಯು ಇಂತಹ ಪ್ರಕರಣಗಳ ವಿವರಗಳನ್ನು ಒದಗಿಸಿದ್ದಲ್ಲಿ ಕಂದಾಯ ಇಲಾಖೆಯ ಸಿಬ್ಬಂದಿಗಳು ಪರಿಶೀಲನೆ ನಡೆಸಲು ಸಹಾಯವಾಗುತ್ತದೆ.

- ಮೇಲ್ಕಂಡ ಅಂಶಗಳ ಆಧಾರದ ಮೇಲೆ ತೆರಿಗೆದಾರರು ಪಾವತಿಸಿರುವ ಮೊತ್ತವೆಷ್ಟು, ರಶೀದಿ ಸಿದ್ದವಾಗಿರುವ ಮೊತ್ತವೆಷ್ಟು ಹಾಗೂ ತೆರಿಗೆದಾರರರು ನ್ಯಾಯಾಯುತವಾಗಿ ಪಾಲಿಕೆಗೆ ಪಾವತಿಸಬೇಕಾಗಿರುವ ಆಸ್ತಿತೆರಿಗೆ ಮೊತ್ತವೆಷ್ಟು ಎಂಬುದನ್ನು ಗುರುತಿಸಬೇಕಾಗಿರುತ್ತದೆ.

## 6. 2016–17 ನೇ ಸಾಲಿಗೆ ಆಸ್ತಿ ತೆರಿಗೆ ಪಾವತಿಸಲು ಸಾಧ್ಯವಾಗದೇ ಇರುವ ಪ್ರಕರಣಗಳು

- 2016–17 ನೇ ಸಾಲಿನ ಆಸ್ತಿತೆರಿಗೆ ಪಾವತಿಸುವ ಸಂಬಂಧ ಕೆಲವೊಂದು ಸ್ವತ್ತುಗಳಿಗೆ ತಂತ್ರಾಂಶದಲ್ಲಿ ನಿರ್ಬಂಧಗೊಳಿಸಲಾಗಿದ್ದು, ಸದರಿ ನಿರ್ಬಂಧನೆಯನ್ನು ತೆರವುಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕಾಗಿರುತ್ತದೆ.

ಅ) 2008 ನೇ ಬ್ಲಾಕ್ ಅವಧಿಯಲ್ಲಿ ತೆರಿಗೆದಾರರಿಗೆ ಕೈಬರಹದ ಮೂಲಕ ನೀಡಲಾಗಿರುವ ರಶೀದಿಗಳನ್ನು ವಲಯ ಮಟ್ಟದ ಅಧಿಕಾರಿಗಳು ದೃಢೀಕರಿಸ'ತಕ್ಕದ್ದು. ಹಾಗೂ ಈ ರೀತಿ ಕೈಬರಹದ ಮೂಲಕ ನೀಡಲಾಗಿರುವ ಎಲ್ಲಾ ರಶೀದಿಗಳ ವಿವರಗಳನ್ನು ವಲಯ ಮಟ್ಟದ ಅಧಿಕಾರಿಗಳಿಂದ ಪಡೆದು, ಈ ಸಂಬಂಧ ರಚಿಸಲಾದ ಅಧಿಕಾರಿಗಳ ತಂಡವು ಪರಿಶೀಲನೆ ನಡೆಸತಕ್ಕದ್ದು. ಮುಂದುವರೆದಂತೆ, ಸದರಿ ತಂಡದಲ್ಲಿನ ಅಧಿಕಾರಿಗಳು ದೃಢೀಕರಿಸಿದ ನಂತರ ರಶೀದಿಗಳ ವಿವರಗಳನ್ನು ತಂತ್ರಾಂಶದಲ್ಲಿಯೇ ನಮೂದಿಸಿ, ನಿರ್ಬಂಧವನ್ನು ತೆರವುಗೊಳಿಸಿ ಆಸ್ತಿತೆರಿಗೆ ಪಾವತಿಗೆ ಅವಕಾಶ ಕಲ್ಪಿಸತಕ್ಕದ್ದು.

ಆ) ಇತ್ತೀಚೆಗೆ ಸಂಪನ್ಮೂಲ ಕ್ರೋಢೀಕರಿಸುವ ಹಿನ್ನಲೆಯಲ್ಲಿ ಬೃಹತ್ ಪ್ರಮಾಣದಲ್ಲಿ ಆಸ್ತಿತೆರಿಗೆ ಪಾವತಿಸಬೇಕಾದ ತೆರಿಗೆದಾರರಿಂದ ಭಾಗಶಃ ಆಸ್ತಿತೆರಿಗೆ ಪಾವತಿಸಿಕೊಳ್ಳಲಾಗಿರುತ್ತದೆ. ಕಾಯ್ದೆ ಅನ್ವಯ 2 ಸಮಕಂತುಗಳಲ್ಲಿ ಮಾತ್ರ ಆಸ್ತಿತೆರಿಗೆ ಸ್ವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಮುಂದುವರೆದಂತೆ, ಕಾಯ್ದೆಯಲ್ಲಿ ಭಾಗಶಃ ಸ್ವೀಕರಿಸಲು ಅವಕಾಶ ಇಲ್ಲದೇ ಇರುವುದರಿಂದ ಈ ರೀತಿ ಸ್ವೀಕರಿಸಲಾದ ಮೊತ್ತವನ್ನು ಆಸ್ತಿತೆರಿಗೆ ತಂತ್ರಾಂಶದಲ್ಲಿ ನಮೂದಿಸದೇ ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ನಮೂದಿರುತ್ತಾರೆ. ಹಾಗೂ ಭಾಗಶಃವಾಗಿಯೇ ಪೂರ್ಣ ಸಾಲಿನ ಆಸ್ತಿತೆರಿಗೆಯನ್ನು ಪಾವತಿಸಿದ್ದರೂ ಸಹ ಸದರಿ ವಿವರಗಳನ್ನು ಸಹ ಐ.ಎಫ್.ಎಂ.ಎಸ್ ತಂತ್ರಾಂಶದಲ್ಲಿಯೇ ನಮೂದಿಸಲಾಗಿರುತ್ತದೆ. ಈ ಎಲ್ಲಾ ಮೊತ್ತವನ್ನು ಪ್ರಸ್ತುತ ಆಸ್ತಿತೆರಿಗೆ ತಂತ್ರಾಂಶದಲ್ಲಿ ನಮೂದಿಸಲು ಕ್ರಮ ಕೈಗೊಳ್ಳತಕ್ಕದ್ದು.

ಇ) ವಲಯ ಕಛೇರಿಗಳಿಂದ ಐ.ಎಫ್.ಎಂ.ಎಸ್. ತಂತ್ರಾಂಶದ ಮೂಲಕ ವಿತರಿಸಲಾಗಿರುವ ಆಸ್ತಿತೆರಿಗೆ ರಶೀದಿಗಳ ವಿವರಗಳನ್ನು ಪಡೆದು, ಅಧಿಕಾರಿಗಳ ತಂಡವು ಈ ಎಲ್ಲಾ ವಿವರಗಳನ್ನು ಪರಿಶೀಲನೆ ಮಾಡತಕ್ಕದ್ದು.

1) ಒಂದು ವೇಳೆ ಭಾಗಶಃವಾಗಿಯೇ ಪೂರ್ಣ ಸಾಲಿನ ಆಸ್ತಿತೆರಿಗೆಯನ್ನು ಪಾವತಿಸಿದ್ದಲ್ಲಿ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ದೃಢೀಕರಿಸಿದ ನಂತರವೇ ಆಸ್ತಿತೆರಿಗೆ ತಂತ್ರಾಂಶದಲ್ಲಿ ಅಖೈರುಗೊಳಿಸತಕ್ಕದ್ದು.

2) ಒಂದು ವೇಳೆ ಭಾಗಶಃ ಪಾವತಿಸಿರುವ ಪ್ರಕರಣಗಳಲ್ಲಿ ಆಯಾ ಸಾಲುಗಳಿಗೆ ಬಡ್ಡಿ ಮತ್ತು ದಂಡವನ್ನು ಲೆಕ್ಕಾಚಾರ ಮಾಡಿ, ಈ ಸಂಬಂಧ ಬೇ–ಬಾಕಿ ಆಸ್ತಿತೆರಿಗೆಗೆ ದಂಡ ಮತ್ತು ಬಡ್ಡಿಯನ್ನು ವಿಧಿಸಿ ವಸೂಲಿ ಮಾಡುವ ಬಗ್ಗೆ ಯಾವ ರೀತಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

3) ಒಂದು ವೇಳೆ ತೆರಿಗೆದಾರರು ಪೂರ್ಣ ಪ್ರಮಾಣದ ಆಸ್ತಿತೆರಿಗೆ ಪಾವತಿಸದೇ ಕೆಲವು ಕಂತುಗಳ ಮೂಲಕ ಭಾಗಶಃ ಆಸ್ತಿತೆರಿಗೆ ಪಾವತಿಸಿರುತ್ತಾರೆ, ಈ ರೀತಿ ಭಾಗಶಃ ಪಾವತಿಸಲಾಗಿರುವ ಮೊತ್ತವನ್ನು ಆಸ್ತಿತೆರಿಗೆ ತಂತ್ರಾಂಶದಲ್ಲಿ ನಮೂದಿಸಬೇಕಾಗಿರುತ್ತದೆ. ಈ ಸಂಬಂಧ ಸೂಕ್ತ ಆದೇಶ ನೀಡಲು ಕೋರಿದೆ.

ಈ) 2015–16 ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ ಆಸ್ತಿತೆರಿಗೆ ಪಾವತಿಸಿರುವ ಕೆಲವು ಪ್ರಕರಣಗಳಲ್ಲಿ ಬ್ಯಾಂಕ್‌ಗಳಿಂದ ನಿಗಧಿತ ಅವಧಿಯೊಳಗಾಗಿ ಮಾಹಿತಿಯನ್ನು ಸ್ವೀಕರಿಸದೇ ಇರುವುದರಿಂದ 2008 ನೇ ಬ್ಲಾಕ್ ಅವಧಿಯ ತಂತ್ರಾಂಶದಲ್ಲಿ ಆಸ್ತಿತೆರಿಗೆ ಪಾವತಿ ವಿವರಗಳು ನಮೂದಿಸಿರುವುದಿಲ್ಲ. ಮುಂದುವರೆದಂತೆ ಪ್ರಸ್ತುತ ಸಾಲಿನಲ್ಲಿ ಹೊಸ ಬ್ಲಾಕ್ ಅವಧಿಯು ಪ್ರಾರಂಭಗೊಂಡಿದ್ದು, ಸದರಿ ಅವಧಿಯಿಂದ ಎನ್.ಐ.ಸಿ ಸಂಸ್ಥೆ ವತಿಯಿಂದ ಹೊಸದಾಗಿ ತಂತ್ರಾಂಶವನ್ನು ಸಿದ್ದಪಡಿಸಿ ನಿರ್ವಹಿಸಲಾಗುತ್ತಿದೆ. ಹಾಗೂ ಈ ಹಿಂದೆ ನಿರ್ವಹಿಸಲಾಗುತ್ತಿದ್ದ ತಂತ್ರಾಂಶವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿರುತ್ತದೆ. 2015–16 ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ ಆಸ್ತಿತೆರಿಗೆ ಪಾವತಿಸಿರುವ ಕೆಲವು ಪ್ರಕರಣಗಳ ವಿವರಗಳನ್ನು ಈ ಹಿಂದೆ ನಿರ್ವಹಿಸಲಾಗುತ್ತಿದ್ದ ಆಸ್ತಿತೆರಿಗೆ ತಂತ್ರಾಂಶದಲ್ಲಿಯೇ ನಮೂದಿಸಲು ಕಂದಾಯ ಇಲಾಖೆಯ ಸಿಬ್ಬಂದಿಗಳಿಗೆ ಅವಕಾಶ ಕಲ್ಪಿಸಿ, ಹಾಗೂ ಈ ರೀತಿ ನಮೂದಿಸಲಾದ ವಿವರಗಳನ್ನು ಎನ್.ಐ.ಸಿ ಸಂಸ್ಥೆಗೆ ವರ್ಗಾಯಿಸತಕ್ಕದ್ದು. ಸದರಿ ಕಾರ್ಯವನ್ನು ಮಾಹಿತಿ ತಂತ್ರಜ್ಞಾನ ವಿಭಾಗವು ಆದ್ಯತೆ ಮೇರೆಗೆ ಪೂರ್ಣಗೊಳಿಸತಕ್ಕದ್ದು.

ಉ) 2008 ನೇ ಬ್ಲಾಕ್ ಅವಧಿಯಲ್ಲಿ ಆಸ್ತಿತೆರಿಗೆ ಪರಿಷ್ಕರಿಸಿ ಪುನರ್ ನಿಗಧಿಪಡಿಸಿರುವ ಸಂಬಂಧ ಮೇಲ್ಮನವಿ ಸಲ್ಲಿಸಿರುವ ಪ್ರಕರಣಗಳನ್ನು ವಲಯ ಮಟ್ಟದ ಅಧಿಕಾರಿಗಳು ಕೂಡಲೇ ಇತ್ಯರ್ಥಗೊಳಿಸತಕ್ಕದ್ದು.

ಊ) ಆಸ್ತಿತೆರಿಗೆ ಪುನರ್ ನಿಗಧಿಪಡಿಸಿ ನೋಟಿಸ್ ಜಾರಿ ಮಾಡಲಾಗಿರುವ ಪ್ರಕರಣಗಳಲ್ಲಿ ವ್ಯತ್ಯಾಸದ ಮೊತ್ತವನ್ನು ಸ್ವೀಕರಿಸುವ ಸಂಬಂಧ ಎನ್.ಐ.ಸಿ ಸಂಸ್ಥೆಯು ಪ್ರತ್ಯೇಕವಾಗಿ ತಂತ್ರಾಂಶವನ್ನು ಸಿದ್ದಪಡಿಸತಕ್ಕದ್ದು.

ಋ) ಕೆಲವೊಂದು ಪ್ರಕರಣಗಳಲ್ಲಿ ಆಸ್ತಿತೆರಿಗೆ ಪರಿಷ್ಕರಿಸಿ ಕೈಬರಹದ ಮೂಲಕ ನೋಟಿಸ್‌ಗಳನ್ನು ಜಾರಿ ಮಾಡಲಾಗಿರುತ್ತದೆ. ಈ ರೀತಿ ಕೈಬರಹದ ಮೂಲಕ ಜಾರಿ ಮಾಡಲಾಗಿರುವ ನೋಟಿಸ್‌ಗಳ ವಿವರಗಳನ್ನು ಆಸ್ತಿತೆರಿಗೆ ತಂತ್ರಾಂಶದಲ್ಲಿ ನಿಗಧಿತ ಅವಧಿಯೊಳಗಾಗಿ ನಮೂದಿಸಲು ವಲಯ ಮಟ್ಟದ ಅಧಿಕಾರಿಗಳಿಗೆ ಅವಕಾಶ ಕಲ್ಪಿಸತಕ್ಕದ್ದು.

7. **ತಿರಸ್ಕೃತಗೊಂಡ ಚೆಕ್‌ಗಳು:**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾಲಿಕೆ ಕಛೇರಿಗಳಲ್ಲಿ ಹಿಂದಿನ ಬ್ಲಾಕ್ ಅವಧಿಗಳಲ್ಲಿ ಚೆಕ್ ಮೂಲಕ ಆಸ್ತಿತೆರಿಗೆ ಸ್ವೀಕರಿಸಲಾಗುತ್ತಿತ್ತು. ಸದರಿ ಚೆಕ್‌ಗಳ ಪೈಕಿ ಕೆಲವು ಚೆಕ್‌ಗಳು ಕಾರಣಾಂತರಗಳಿಂದ ತಿರಸ್ಕೃತಗೊಂಡಿರುತ್ತದೆ. ಇಂತಹ ಪ್ರಕರಣಗಳಲ್ಲಿ ಚೆಕ್ ತಿರಸ್ಕೃತಗೊಂಡಿದ್ದರೂ ಸಹ ತಂತ್ರಾಂಶದಲ್ಲಿ ಆಸ್ತಿತೆರಿಗೆ ಪಾವತಿ ವಿವರಗಳು ನಮೂದಾಗಿರುತ್ತದೆ.
- ಇಂತಹ ಪ್ರಕರಣಗಳಿಗೆ ಆಸ್ತಿತೆರಿಗೆ ಪಾವತಿಯನ್ನು ನಿರ್ಬಂಧಗೊಳಿಸಲಾಗಿರುತ್ತದೆ. ಆದುದರಿಂದ ಸದರಿ ರಶೀದಿ ವಿವರಗಳನ್ನು ತಂತ್ರಾಂಶದಲ್ಲಿ ರದ್ದುಪಡಿಸಿ, ತಿರಸ್ಕೃತಗೊಂಡ ಚೆಕ್‌ಗಳನ್ನು ತೆರಿಗೆದಾರರಿಗೆ ಹಿಂತಿರುಗಿಸಿ, ಸದರಿ ವರ್ಷದ ಆಸ್ತಿತೆರಿಗೆಯನ್ನು ಪ್ರಸ್ತುತ ತಂತ್ರಾಂಶದ ಮೂಲಕ ಬಡ್ಡಿ ಮತ್ತು ದಂಡ ಸಮೇತ ಪಾವತಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ.

8. **ಹೊಸದಾಗಿ ನೋಟಿಸ್ ಜಾರಿ ಮಾಡುವ ಕುರಿತು.**

- ಆಸ್ತಿತೆರಿಗೆ ಜಾಲಕ್ಕೆ ಒಳಪಟ್ಟು, ಆಸ್ತಿತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳನ್ನು ಗುರುತಿಸಿ ನೋಟಿಸ್‌ಗಳನ್ನು ಜಾರಿ ಮಾಡಲು ಎನ್.ಐ.ಸಿ ಸಂಸ್ಥೆಯು ಪ್ರತ್ಯೇಕವಾಗಿ ತಂತ್ರಾಂಶವನ್ನು ಸಿದ್ದಪಡಿಸತಕ್ಕದ್ದು.
- ಹೊಸದಾಗಿ ಆಸ್ತಿತೆರಿಗೆ ವ್ಯಾಪ್ತಿಗೆ ಒಳಪಟ್ಟಿರುವ ಸ್ವತ್ತುಗಳಿಗೆ ಆಸ್ತಿತೆರಿಗೆ ನಿಗಧಿಪಡಿಸಿ ವಿಶೇಷ ಸೂಚನಾ ಪತ್ರವನ್ನು ಜಾರಿ ಮಾಡಬೇಕಾಗಿರುತ್ತದೆ. ಈ ಸಂಬಂಧ ಎನ್.ಐ.ಸಿ ಸಂಸ್ಥೆಯು ಚಾಲ್ತಿಯಲ್ಲಿರುವ ತಂತ್ರಾಂಶದಲ್ಲಿಯೇ ಸೂಕ್ತ ಮಾರ್ಪಾಡುಗಳನ್ನು ಮಾಡತಕ್ಕದ್ದು.
- ಪ್ರಸ್ತುತ ಸಾಲಿನಲ್ಲಿ ಆಸ್ತಿತೆರಿಗೆ ಪಾವತಿಸುವ ಸಂಧರ್ಭದಲ್ಲಿ ತಪ್ಪು ಮಾಹಿತಿ ನೀಡಿ ಕಡಿಮೆ ಆಸ್ತಿತೆರಿಗೆ ಪಾವತಿಸಿರುವ ಪ್ರಕರಣಗಳಲ್ಲಿ ಪರಿಷ್ಕೃತ ಘೋಷಣೆಗಳನ್ನು ಸಲ್ಲಿಸಲು 30 ದಿನಗಳ ಕಾಲವಕಾಶ ನೀಡಿ, ನಂತರ ಘೋಷಣೆಗಳನ್ನು ಪರಿಶೀಲಿಸಿ, ನ್ಯೂನ್ಯತೆ ಕಂಡುಬಂದ ಪ್ರಕರಣಗಳಲ್ಲಿ ಆಸ್ತಿತೆರಿಗೆ ಪರಿಷ್ಕರಿಸಿ, ಪರಿಷ್ಕೃತ ನೋಟಿಸ್ ಜಾರಿ ಮಾಡಬೇಕಾಗಿರುತ್ತದೆ.

9. **ನ್ಯಾಯಾಲಯದ ಪ್ರಕರಣಗಳಲ್ಲಿ ಆಸ್ತಿತೆರಿಗೆ ಸಂಗ್ರಹಿಸುವ ಕುರಿತು.**

- ವಲಯ ಕಛೇರಿಗಳಲ್ಲಿ ನಿಗಧಿಪಡಿಸಲಾಗಿರುವ ಆಸ್ತಿತೆರಿಗೆಯನ್ನು ಪ್ರಶ್ನಿಸಿ, ತೆರಿಗೆದಾರರು ನ್ಯಾಯಾಲಯದಲ್ಲಿ ದಾಖಲಾಗಿರುವ ದಾವೆಯನ್ನು ನ್ಯಾಯಾಲಯವು ವಿಚಾರಣೆ ಕೈಗೊಂಡು ನಿಗಧಿಪಡಿಸಲಾಗಿರುವ ಆಸ್ತಿತೆರಿಗೆ ಮೊತ್ತದ ಪೈಕಿ ಭಾಗಶಃ ಆಸ್ತಿತೆರಿಗೆಯನ್ನು ಪಾವತಿಸುವಂತೆ, ದಾವೆದಾರರಿಗೆ ಆದೇಶಿಸಿರುತ್ತದೆ. ಸದರಿ ಆದೇಶದಂತೆ, ತೆರಿಗೆದಾರರು ಪಾವತಿಸುವ ಭಾಗಶಃ ಆಸ್ತಿತೆರಿಗೆ ಮೊತ್ತಕ್ಕೆ ರಶೀದಿಗಳನ್ನು ನೀಡಲು ಎನ್.ಐ.ಸಿ ಸಂಸ್ಥೆ ವತಿಯಿಂದ ತಂತ್ರಾಂಶವನ್ನು ಸಿದ್ದಪಡಿಸಿ, ವಲಯ ಜಂಟಿ ಆಯುಕ್ತರಗಳ ಲಾಗಿನ್‌ಗಳಲ್ಲಿ ರಶೀದಿಗಳನ್ನು ಸಿದ್ದಪಡಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ.

10. **ದಿನಾಂಕಃ 31-03-2016 ಕ್ಕಿಂತ ಮುಂಚೆ ಆಸ್ತಿತೆರಿಗೆ ಪಾವತಿಸಿರುವ ಕೆಲವು ಪ್ರಕರಣಗಳಲ್ಲಿ ರಶೀದಿಗಳನ್ನು ಸಿದ್ದಪಡಿಸುವ ಕುರಿತು.**

- ಹಿಂದಿನ ಆಯುಕ್ತರವರ ಆದೇಶದ ಮೇರೆಗೆ ಈ ಹಿಂದೆ ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿದ್ದ ಆಸ್ತಿತೆರಿಗೆ ತಂತ್ರಾಂಶವನ್ನು ಸ್ಥಗಿತಗೊಳಿಸಿ, ದಿನಾಂಕ: 01-4-2016 ರಿಂದ ಎನ್.ಐ.ಸಿ ಸಂಸ್ಥೆಯ ವತಿಯಿಂದ ಹೊಸದಾಗಿ ತಂತ್ರಾಂಶವನ್ನು ಸಿದ್ದಪಡಿಸಿ ನಿರ್ವಹಿಸಲಾಗುತ್ತಿದೆ. ಮುಂದುವರೆದಂತೆ, 2015-16ನೇ ಸಾಲಿನ ಕೊನೆಯ ದಿನಗಳಲ್ಲಿ ಹಲವಾರು ತೆರಿಗೆದಾರರು ಆಸ್ತಿತೆರಿಗೆ ಪಾವತಿಸಿದ್ದು, ಸದರಿಯವರುಗಳಿಗೆ ರಶೀದಿಗಳನ್ನು ಸಿದ್ದಪಡಿಸಲು ಸಾಧ್ಯವಾಗಿರುವುದಿಲ್ಲ. ಇಂತಹ ಪ್ರಕರಣಗಳ

ವಿವರಗಳನ್ನು ವಲಯ ಕಛೇರಿಗಳಿಂದ ಪಡೆದು, ಪರಿಶೀಲಿಸಿ, ಮಾಹಿತಿ ತಂತ್ರಜ್ಞಾನ ವಿಭಾಗದಿಂದ ರಶೀದಿಗಳನ್ನು ಸಿದ್ದಪಡಿಸಿ ವಲಯ ಕಛೇರಿಗಳಿಗೆ ಕಳುಹಿಸಬೇಕಾಗಿರುತ್ತದೆ.

11. **<u>ದಿನಾಂಕ: 27–04–2016 ರಂದು ಆನ್‌ಲೈನ್ ಮೂಲಕ ಆಸ್ತಿತೆರಿಗೆ ಪಾವತಿಸಿರುವ ತೆರಿಗೆದಾರರಿಗೆ ರಶೀದಿ ನೀಡುವ ಕುರಿತು.</u>**

- ದಿನಾಂಕ: 27–04–2016 ರಂದು ಹಲವಾರು ತೆರಿಗೆದಾರರು ಆನ್‌ಲೈನ್ ಮೂಲಕ ಆಸ್ತಿತೆರಿಗೆ ಪಾವತಿಸಿದ್ದು, ಸದರಿ ದಿನಾಂಕದಂದು ತೆರಿಗೆದಾರರ ಖಾತೆಯಿಂದ ನಗರ ಪಾಲಿಕೆ ಖಾತೆಗೆ ಜಮೆ ಆಗಿರುತ್ತದೆ. ಹಾಗೂ ಗೇಟ್‌ವೇಗಳು ಸಹ ವಹಿವಾಟು ಸಂಖ್ಯೆಗಳನ್ನು ನೀಡಿರುತ್ತಾರೆ. ಗೇಟ್‌ವೇಗಳು ನೀಡಿರುವ ವಹಿವಾಟು ಸಂಖ್ಯೆಗಳೊಂದಿಗೆ ಪರಿಶೀಲಿಸಲಾಗಿ, ಸದರಿ ವಹಿವಾಟು ನಿಗಧಿತ ಸ್ವತ್ತುಗಳಿಗೆ ದಾಖಲಿಸಿಕೊಳ್ಳದೇ ಬೇರೆ ಸ್ವತ್ತಿಗೆ ಹಾಗೂ ಬೇರೆ ಮೊತ್ತಕ್ಕೆ ದಾಖಲಿಸಿಕೊಂಡಿರುವುದು ಕಂಡುಬಂದಿದೆ. ಆದುದರಿಂದ ಆಸ್ತಿ ತೆರಿಗೆ ಪಾವತಿಸಿರುವ ಸ್ವತ್ತಿಗೆ ಆಸ್ತಿತೆರಿಗೆ ಬಾಕಿ ಇರುವುದಾಗಿ ಕಂಡುಬರುತ್ತಿದೆ.
- ಎನ್.ಐ.ಸಿ ಸಂಸ್ಥೆಯು ಈಗಾಗಲೇ ಬಿಲ್‌ಡೆಸ್ಕ್ ಗೇಟ್‌ವೇಯಿಂದ ದಿನಾಂಕ: 27–04–2016 ರಂದು ಆಸ್ತಿತೆರಿಗೆ ಪಾವತಿಸಿರುವ ವಿವರಗಳನ್ನು ಪಡೆದು, ಪರಿಶೀಲಿಸಲಾಗಿ, ಸಂಬಂಧಪಟ್ಟ ವಹಿವಾಟು ಸಂಖ್ಯೆಯು ನಿಗಧಿತ ಸ್ವತ್ತುಗಳಿಗೆ ದಾಖಲಿಸಿಕೊಳ್ಳದೇ ಇರುವುದು ಕಂಡುಬಂದಿದೆ.
- ಆದುದರಿಂದ ದಿನಾಂಕ: 27–04–2016 ರಂದು ಆನ್‌ಲೈನ್ ಮೂಲಕ ಆಸ್ತಿತೆರಿಗೆ ಪಾವತಿಸಿರುವ ವಿವರಗಳನ್ನು ಪಡೆದು, ಪರಿಶೀಲಿಸಿ, ನೈಜವಾಗಿ ಪಾವತಿಸಲಾಗಿರುವ ಸ್ವತ್ತಿಗೆ ರಶೀದಿಗಳನ್ನು ಸಿದ್ದಪಡಿಸಬೇಕಾಗಿರುತ್ತದೆ.

12. **<u>ಇ–ಆಡಳಿತ ತಂತ್ರಾಂಶದಲ್ಲಿ ತಿದ್ದುಪಡಿ ಮಾಡಲಾದ ವಿವರಗಳನ್ನು ಆಸ್ತಿತೆರಿಗೆ ತಂತ್ರಾಂಶದಲ್ಲಿ ಅಖೈರುಗೊಳಿಸುವ ಬಗ್ಗೆ.</u>**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಳೆ 100 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಈಗಾಗಲೇ ಬಹುತೇಕ ಸ್ವತ್ತುಗಳಿಗೆ ಪಿ.ಐ.ಡಿ ಸಂಖ್ಯೆಗಳನ್ನು ನೀಡಿ, ಸದರಿ ಸ್ವತ್ತುಗಳ ವಿವರಗಳನ್ನು ಇ–ಆಡಳಿತ ತಂತ್ರಾಂಶದ ಮೂಲಕ ಗಣಕೀಕೃತಗೊಳಿಸಲಾಗಿರುತ್ತದೆ. ಪ್ರಸ್ತುತ ನಗರ ಪಾಲಿಕೆಯು ನೀಡಲಾಗಿರುವ ಖಾತಾ ಪ್ರಮಾಣ ಪತ್ರ ಹಾಗೂ ಖಾತಾ ಉದ್ಧೃತ ಭಾಗವನ್ನು ಗಣಕಯಂತ್ರದ ಮೂಲಕವೇ ವಿತರಿಸಲಾಗುತ್ತಿರುತ್ತದೆ. ಮುಂದುವರೆದಂತೆ, ಸದರಿ ಸ್ವತ್ತುಗಳ ವಿವರಗಳನ್ನು ಇ–ಆಡಳಿತ ತಂತ್ರಾಂಶದಲ್ಲಿಯೇ ಮಾರ್ಪಾಡು ಮಾಡಿ ನಮೂದಿಸಲಾಗುತ್ತಿದೆ.
- ಈ ರೀತಿ ತಿದ್ದುಪಡಿ ಮಾಡಲಾಗುವ ವಿವರಗಳನ್ನು ವಾರಕ್ಕೊಮ್ಮೆ ಎನ್.ಐ.ಸಿ ಸಂಸ್ಥೆಯವರಿಗೆ ಕಳುಹಿಸಿ, ಆಸ್ತಿತೆರಿಗೆ ತಂತ್ರಾಂಶದಲ್ಲಿ ಅಖೈರುಗೊಳಿಸಲಾಗುತ್ತಿದೆ. ಇದರಿಂದ ಕ್ಲುಪ್ತ ಅವಧಿಯಲ್ಲಿ ವಿವರಗಳು ಆಸ್ತಿತೆರಿಗೆ ತಂತ್ರಾಂಶದಲ್ಲಿ ಅಖೈರುಗೊಳ್ಳದೇ ಇರುವುದರಿಂದ ತೆರಿಗೆದಾರರಿಗೆ ಅನಾನುಕೂಲವಾಗುತ್ತಿದೆ. ಆದುದರಿಂದ ನಗರ ಪಾಲಿಕೆಯ ಮಾಹಿತಿ ತಂತ್ರಜ್ಞಾನ ವಿಭಾಗವು ವೆಬ್–ಸರ್ವೀಸ್ ಮುಖಾಂತರ ಎನ್.ಐ.ಸಿ ಸಂಸ್ಥೆಯೊಂದಿಗೆ ಇ–ಆಡಳಿತ ತಂತ್ರಾಂಶದಲ್ಲಿ ತಿದ್ದುಪಡಿ ಮಾಡಲಾಗುವ ವಿವರಗಳ ಮಾಹಿತಿಯನ್ನು ಹಂಚಿಕೆ ಮಾಡಿಕೊಂಡು ಕ್ಲುಪ್ತ ಅವಧಿಯಲ್ಲಿ ಆಸ್ತಿತೆರಿಗೆ ತಂತ್ರಾಂಶದಲ್ಲಿ ಅಖೈರುಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.

13. <u>ಆಸ್ತಿತೆರಿಗೆ ವಸೂಲಾತಿ ಅಂಕಿ-ಅಂಶಗಳು</u>

- ಆಸ್ತಿತೆರಿಗೆ ಸಂಗ್ರಹಣೆ ಕುರಿತು ಈಗಾಗಲೇ ವಲಯ ಮಟ್ಟದ ಅಧಿಕಾರಿಗಳಿಗೆ ಪ್ರತ್ಯೇಕವಾರು ಲಾಗಿನ್‌ಗಳನ್ನು ನೀಡಲಾಗಿರುತ್ತದೆ. ಸದರಿ ಲಾಗಿನ್‌ಗಳಲ್ಲಿ ಸಂಬಂಧಪಟ್ಟ ವ್ಯಾಪ್ತಿಯಲ್ಲಿರುವ ಸ್ವತ್ತುಗಳ ಆಸ್ತಿತೆರಿಗೆ ಪಾವತಿ ಕುರಿತು ವಿವಿಧ ರೀತಿಯ ಅಂಕಿ-ಅಂಶಗಳ ವಿವರಗಳನ್ನು ಅಳವಡಿಸಲು ತಂತ್ರಾಂಶವನ್ನು ಎನ್.ಐ.ಸಿ ಸಂಸ್ಥೆ ವತಿಯಿಂದ ಸಿದ್ದಪಡಿಸಬೇಕಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯನ್ನು ತಯಾರಿಸಿ ಮಂಡಿಸಿದೆ.

<u>ನಿರ್ಣಯ:</u> **ಆಯುಕ್ತರ ದಿನಾಂಕ: 21-11-2016ರ ಟಿಪ್ಪಣಿಯನ್ನು ಒಪ್ಪುತ್ತಾ,** ಆಸ್ತಿ ತೆರಿಗೆ ಪಾವತಿಸುವಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ದಿನಾಂಕ: 11-11-2016ರಂದು ಇಲಾಖಾ ಮುಖ್ಯಸ್ಥರೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಿದಂತೆ, **"ಪ್ರಸ್ತುತ ಆಸ್ತಿ ತೆರಿಗೆಯನ್ನು ಅವಧಿ ಮೀರಿ ಅಥವಾ ತಡವಾಗಿ ಪಾವತಿಸುತ್ತಿರುವ ಮೊತ್ತದ ಮೇಲೆ ವಿಧಿಸುತ್ತಿರುವ ಪ್ರತಿ ದಿನದ ಬಡ್ಡಿಯ ಪದ್ಧತಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸುವುದು. ಇನ್ನು ಮುಂದೆ ಬಡ್ಡಿಯನ್ನು ಅಂದರೆ ಆಸ್ತಿ ತೆರಿಗೆಯನ್ನು ಪಾವತಿಸುವ ದಿನಾಂಕದ ಹಿಂದಿನ ತಿಂಗಳ ಅಂತ್ಯಕ್ಕೆ ಮಾತ್ರ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ವಿಧಿಸುವುದು ಹಾಗೂ ಸದರಿ ಮೊತ್ತವನ್ನು ಆ ತಿಂಗಳ ಅಂತ್ಯದವರೆಗೆ ಪಾವತಿಸಲು ಅವಕಾಶವಿರುವಂತೆ ಹಾಗೂ ಚಲನ್ ಒಂದು ಭಾರಿ ತೆಗೆದುಕೊಂಡ ಮೇಲೆ ಆ ತಿಂಗಳ ಅಂತ್ಯದವರೆಗೆ ಅದೇ ಮೊತ್ತ ಪಾವತಿಗೆ ಅವಕಾಶ ಕಲ್ಪಿಸುವಂತೆ ಮೆ॥. ಎನ್.ಐ.ಸಿ ಯಲ್ಲಿನ ತಂತ್ರಾಂಶದಲ್ಲಿ ಸೂಕ್ತ ರೀತಿಯಲ್ಲಿ ಮಾರ್ಪಾಡಿಸುವ"** ಈ ತಿದ್ದುಪಡಿಯೊಂದಿಗೆ ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.

***<u>29]. ವಿಷಯದ ಸಂಖ್ಯೆ: ತೆಆಸ್ಥಾಸ/90(2)/2016-17</u>***

ನಿರ್ಣಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಟೆಕ್ ಪಾರ್ಕ್‌ಗಳು, ಮಾಲ್‌ಗಳು ಮತ್ತು ಬೃಹತ್ ವಾಣಿಜ್ಯ ಕಟ್ಟಡಗಳ ಮಾಲೀಕರು ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ ತಮ್ಮ ಕಟ್ಟಡಗಳ ವಿಸ್ತೀರ್ಣಗಳನ್ನು ಘೋಷಿಸಿಕೊಂಡಿರುವ ಬಗ್ಗೆ ನಿಖರವಾದ ಮಾಹಿತಿಯನ್ನು ಪಡೆಯುವ ಸಲುವಾಗಿ ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ ಮಹದೇವಪುರ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿ ಪ್ರಾಯೋಗಿಕವಾಗಿ 10 ಬೃಹತ್ ವಾಣಿಜ್ಯ ಕಟ್ಟಡಗಳನ್ನು ಟೋಟಲ್ ಸರ್ವೇ ಸ್ಟೇಷನ್ ನಡೆಸಿ, ಆಸ್ತಿ ವಿಸ್ತೀರ್ಣದಲ್ಲಿ ಕಡಿಮೆ ಘೋಷಿಸಿ ಕೊಂಡಿರುವ ಪರಿಣಾಮವಾಗಿ ಪಾಲಿಕೆಗೆ ಕಡಿಮೆ ಆಸ್ತಿ ತೆರಿಗೆ ಪಾವತಿಸಿರುವುದನ್ನು ಪತ್ತೆ ಹಚ್ಚಿ ಸುಮಾರು ರೂ.231.66 ಕೋಟಿಗೂ ಹೆಚ್ಚು ಮೊತ್ತದ ಆಸ್ತಿ ತೆರಿಗೆಯನ್ನು ದಂಡದೊಂದಿಗೆ ವಸೂಲಾತಿಗೆ ಸೂಚಿಸಲಾಗಿರುತ್ತದೆ ಹಾಗೂ ದಿನಾಂಕ 11-11-2016 ರಂದು ನಡೆದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ, ಪ್ರಸ್ತುತ ಪಾಲಿಕೆ ವ್ಯಾಪ್ತಿಯಲ್ಲಿ ಅಂದಾಜು 77ಕ್ಕೂ ಹೆಚ್ಚು ಟೆಕ್ ಪಾರ್ಕ್‌ಗಳು, 51ಕ್ಕೂ ಹೆಚ್ಚು ಮಾಲ್‌ಗಳು ಹಾಗೂ ಬೃಹತ್ ವಾಣಿಜ್ಯ ಕಟ್ಟಡಗಳ ಮಾಲೀಕರು ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ ಆಸ್ತಿ ಮತ್ತು ಕಟ್ಟಡಗಳ ವಿಸ್ತೀರ್ಣವನ್ನು ಘೋಷಿಸಿಕೊಂಡಿರುವ ಬಗ್ಗೆ ಟೋಟಲ್ ಸ್ಟೇಷನ್ ಸರ್ವೇ ನಡೆಸಿ ನಿಖರವಾದ

ಮಾಹಿತಿಯನ್ನು ಪಡೆದು ಆಸ್ತಿ ಮತ್ತು ಕಟ್ಟಡಗಳ ವಿಸ್ತೀರ್ಣವನ್ನು ಕಡಿಮೆ ಘೋಷಿಸಿಕೊಂಡಿರುವ ಬಗ್ಗೆ ಪತ್ತೆಹಚ್ಚಿ, ಹೆಚ್ಚುವರಿಯಾಗಿ ಆದಾಯ ಕ್ರೂಢೀಕರಣಕ್ಕೆ ಕ್ರಮಕೈಗೊಳ್ಳುವುದು ಅವಶ್ಯಕವಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕಾರ್ಯವನ್ನು ನಿಗಧಿತ ಕಾಲಮಿತಿ ಒಳಗೆ ಕ್ರಮಕೈಗೊಳ್ಳುವುದು ಅವಶ್ಯಕವಾಗಿರುವುದರಿಂದ ಕಾರ್ಯನಿರ್ವಹಣೆ, ವಲಯವರು ಅಲ್ಪಾವಧಿ ಟೆಂಡರ್ ಕರೆದು ಏಜೆನ್ಸಿಗಳನ್ನು ನೇಮಿಸಲು ಕೂಡಲೇ ಆಯುಕ್ತರು ಅಗತ್ಯ ಕ್ರಮವಹಿಸುವುದೆಂದು ಸಮಿತಿಯು ಸರ್ವಾನುಮತದಿಂದ ನಿರ್ಣಯಿಸಿತು.

## *30]. ವಿಷಯದ ಸಂಖ್ಯೆ: ತೆಆಸ್ಥಾಸ/91(3)/2016-17*

ನಿರ್ಣಯ: ಕೆ.ಎಂ.ಸಿ. ಕಾಯಿದೆ 110ರ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಕಟ್ಟಡಗಳು ಮತ್ತು ಆಸ್ತಿಗಳಿಂದ ಸೇವಾ ಶುಲ್ಕಗಳನ್ನು ನಿಯಮಾನುಸಾರ ಸಂಗ್ರಹಿಸಬೇಕಾಗಿರುತ್ತದೆ. ದಿನಾಂಕ 18-11-2016 ರಂದು ಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರು ಒಳಚರಂಡಿಗಳ ಸಮಸ್ಯೆಗಳ ಬಗ್ಗೆ ಚರ್ಚಿಸಲು ಮೆ: ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳೊಂದಿಗೆ ಸಭೆಯು ನಡೆದಿದ್ದು, ಸದರಿ ಸಭೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಮೆ: ಬಿ.ಡಬ್ಲ್ಯೂ.ಎಸ್.ಎಸ್.ಬಿ. [BWSSB] ಸಂಸ್ಥೆಗೆ ಸೇರಿದ ಆಸ್ತಿಗಳಿಗೆ ಸೇವಾ ಶುಲ್ಕಗಳನ್ನು ನಿಯಮಾನುಸಾರ ಪಾಲಿಕೆಗೆ ಪಾವತಿಸುತ್ತಿರುವ ಬಗ್ಗೆ ವಿವರವಾದ ಮಾಹಿತಿಗಳನ್ನು ಒದಗಿಸುವಂತೆ ಸಭೆಯಲ್ಲಿ ಕೋರಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮತ್ತು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಸಂಪನ್ಮೂಲವನ್ನು ಕ್ರೂಡೀಕರಿಸುವ ದೃಷ್ಟಿಯಿಂದ ಪಾಲಿಕೆಯ ವ್ಯಾಪ್ತಿಯಲ್ಲಿರುವ ಮೆ: ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಂಸ್ಥೆಗೆ ಸೇರಿದ ಆಸ್ತಿಗಳಾದ ಕಾವೇರಿ ಭವನ, ವಸತಿ ಗೃಹಗಳು, ವಲಯ ಕಛೇರಿಗಳು, ಓವರ್‌ಹೆಡ್ ಟ್ಯಾಂಕ್‌ಗಳು, ಭೂಮಟ್ಟದ ನೀರು ಶೇಖರಣಾ ಟ್ಯಾಂಕ್‌ಗಳು ಹಾಗೂ ಸದರಿ ಸಂಸ್ಥೆಗೆ ಸೇರಿದ ಇನ್ನಿತರೇ ಆಸ್ತಿಗಳಿಂದ ಸೇವಾ ಶುಲ್ಕಗಳನ್ನು ನಿಯಮನುಸಾರ ಸಂಗ್ರಹಿಸಲು ಕ್ರಮಕೈಗೊಳ್ಳುವುದು ಅನಿವಾರ್ಯವಾಗಿರುತ್ತದೆ ಮತ್ತು ಸದರಿ ಸಂಸ್ಥೆಗೆ ಸೇರಿದ ಮೇಲ್ಕಂಡ ಎಲ್ಲಾ ರೀತಿಯ ಆಸ್ತಿಗಳಿಂದ ಸೇವಾ ಶುಲ್ಕವನ್ನು ವಸೂಲಿಸುವುದು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಟ್ಟಡಗಳ ಬಗ್ಗೆ ಎಲ್ಲಾ ವಲಯಗಳಲ್ಲಿರುವ ಆಸ್ತಿಗಳನ್ನು ಸರ್ವೇ ಮಾಡಿಸಿ ಸೇವಾ ಶುಲ್ಕ ಸಂಗ್ರಹಿಸಿರುವ ಬಗ್ಗೆ ಮಾಹಿತಿಯನ್ನು ಪಡೆದು ಸೇವಾ ಶುಲ್ಕ ಪಾವತಿಸದೇ ಇದ್ದಲ್ಲಿ ಕಡ್ಡಾಯವಾಗಿ ವಸೂಲಾತಿಗೆ ಕ್ರಮಕೈಗೊಳ್ಳುವುದು.

ಮುಂದುವರೆದು, ಪಾಲಿಕೆ ವ್ಯಾಪ್ತಿಯಲ್ಲಿರುವ ಪೆಟ್ರೋಲ್ ಬಂಕ್‌ಗಳಿಂದ ಪಾಲಿಕೆಯ ವ್ಯಾಪ್ತಿಯಲ್ಲಿನ ಪೆಟ್ರೋಲ್ ಬಂಕ್‌ಗಳಿಂದ ಭೂಮಿಯ ಮೇಲಿರುವ ಕಟ್ಟಡಗಳಿಗೆ ಆಸ್ತಿ ತೆರಿಗೆಯನ್ನು ಸಂಗ್ರಹಿಸುತ್ತಿದ್ದು, ಭೂಮಿ ಒಳಗಿರುವ [Underground Petrol Storage] ಇಂಧನ ಸಂಗ್ರಹಿಸುವ ಪ್ರದೇಶಗಳಿಗೆ ನಿಯಮನುಸಾರ ಆಸ್ತಿ ತೆರಿಗೆ ವಿಧಿಸಿ ಸಂಗ್ರಹಿಸುತ್ತಿರುವುದು ಕಂಡುಬರುತ್ತಿಲ್ಲ. ಆದ್ದರಿಂದ ಈ ಸಂಬಂಧ ಪಾಲಿಕೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಪೆಟ್ರೋಲ್ ಬಂಕ್‌ಗಳ ಬಗ್ಗೆ ಸರ್ವೇ ಕಾರ್ಯ ನಡೆಸಿ ನಿಯಮಾನುಸಾರ ಆಸ್ತಿ ತೆರಿಗೆ ವಸೂಲಾತಿಗೆ ಕ್ರಮಕೈಗೊಳ್ಳುವುದು.

ಮೇಲ್ಕಂಡ ಅಂಶಗಳ ಬಗ್ಗೆ ಆಯುಕ್ತರು ಕೂಡಲೇ ಸೂಕ್ತ ಕ್ರಮವಹಿಸುವುದೆಂದು ಸಮಿತಿಯು ಸರ್ವಾನುಮತದಿಂದ ನಿರ್ಣಯಿಸಿತು.

**(ಎಂ.ಕೆ. ಗುಣಶೇಖರ್)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**